₹ 5/-

ನೇಸರು

ತಿಂಗಳೋಲೆ

PAGES 20

SEPTEMBER 2025 Nesaru Tingalole Vol. XLIII - 09

ಮೈಸೂರು ಅಸೋಸಿಯೇಷನ್ನಿನ ಶತಮಾನೋತ್ಸವದ ವರ್ಷ

Mysore Association's Centenary Year (1926 - 2026)

ಶ್ರೀ ಸ್ವರ್ಣ ಗೌರಿ ಮತ್ತು ಶ್ರೀ. ವರಸಿದ್ಧಿ ವಿನಾಯಕ ದೇವರ ಸ್ಥಾಪನೆ

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

ಶತಮಾನೋತ್ಸವ ಚಿತ್ರಕಲಾ ಸ್ಪರ್ಧೆ

ನಮ್ಮ ಶತಮಾನೋತ್ಸವದ ಅಂಗವಾಗಿ ಈ ವರ್ಷವೂ ಕೂಡ ಮಕ್ಕಳಿಗಾಗಿ ಹಾಗೂ ವಯಸ್ಕರಿಗಾಗಿ ಚಿತ್ರ ಬರೆಯುವ ಸ್ಪರ್ಧೆಯನ್ನು ಆಗಸ್ಟ್ ತಿಂಗಳಿನ 10ನೇ ತಾರೀಖಿನಂದು ಮಾಡಬೇಕು ಎಂದು ತೀರ್ಮಾನವಾಗಿತ್ತು. ಮಕ್ಕಳಿಗಾಗಿ ಚಿತ್ರ ಬರೆಯುವ ಸ್ಪರ್ಧೆಯಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಮಕ್ಕಳಿಗೆ ಐದು ವಿಭಾಗಗಳನ್ನು ಮಾಡಿದ್ದು, ದೊಡ್ಡವರಿಗೆ ಸ್ಥಳದಲ್ಲಿಯೇ ಕಲಾಕೃತಿಯನ್ನು ರಚಿಸುವ ಸ್ಪರ್ಧೆಗೆ ಯಾವುದೇ ವಯೋಮಿತಿಯನ್ನು ಹಾಕಿರಲಿಲ್ಲ.

ಶತಮಾನೋತ್ಸವದ ಅಂಗವಾಗಿ ನಡೆಯುತ್ತಿರುವ ಈ ಸ್ಪರ್ಧೆಗೆ ನಾವು ಬಹಳ ಆಕರ್ಷಕವಾದ ನಗದು ಬಹುಮಾನಗಳನ್ನು ಘೋಷಿಸಿದ್ದೆವು. ಮೊದಲನೆಯ ಬಹುಮಾನ 10,000 ರೂ, ಎರಡನೆಯ ಬಹುಮಾನ 7000 ರೂ. ಮೂರನೆಯ ಬಹುಮಾನ 5,000 ರೂಗಳು. ಇದಲ್ಲದೆ ಹೆಣ್ಣುಮಕ್ಕಳು ಈ ಕಾರ್ಯಕ್ರಮದಲ್ಲಿ ಹೆಚ್ಚು ಹೆಚ್ಚು ಭಾಗವಹಿಸಲಿ ಎಂಬ ಉದ್ದೇಶದಿಂದ ಹೆಣ್ಣುಮಕ್ಕಳ ಮೂರು ಅತ್ಯುತ್ತಮ ಕಲಾಕೃತಿಗಳಿಗೆ 3000 ರೂಪಾಯಿಗಳ ವಿಶೇಷ ಬಹುಮಾನವನ್ನು ಘೋಷಿಸಲಾಗಿತ್ತು.

ಅದರ ಪ್ರಕಾರವೇ ನೋಂದಣಿಗಾಗಿ ಗೂಗಲ್ ಫಾರ್ಮ್ ಅನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡಲಾಯಿತು. ಜೂನ್ ಆರರವರೆಗೆ ಫಾರ್ಮ್ ಅನ್ನು ಎಲ್ಲರಿಗೂ ತುಂಬಿಸಲು ಅವಕಾಶವಿತ್ತು.

ಇದಕ್ಕೆ ಅತ್ಯುತ್ತಮವಾದ ಪ್ರತಿಕ್ರಿಯೆ ಸಿಕ್ಕು ನಾವು ಆರನೇ ತಾರೀಕು ಸಂಜೆ ಈ ಗೂಗಲ್ ಫಾರಂ ಅನ್ನು ಮುಚ್ಚಿದಾಗ ಅದರಲ್ಲಿ ನಮಗೆ

ವಿಭಾಗ 1 (ತರಗತಿ 1–2) : 108 ಮಕ್ಕಳು, ವಿಭಾಗ 2 (ತರಗತಿ 3–4) : 145 ಮಕ್ಕಳು

ವಿಭಾಗ 3 (ತರಗತಿ 5–6) : 38 ಮಕ್ಕಳು, ವಿಭಾಗ 4 (ತರಗತಿ 7–8) : 30 ಮಕ್ಕಳು

ವಿಭಾಗ 5 (ತರಗತಿ 9–10) : 18 ಮಕ್ಕಳು, ಮುಕ್ತ ವಿಭಾಗ : 44 ನೋಂದಣಿಗಳು

ನಮ್ಮ ನೋಂದಣಿಯ ಅವಧಿ ಮುಗಿದ ಮೇಲೂ ದೂರವಾಣಿಯ ಮೂಲಕ ವಿನಂತಿಸಿದ ಅನೇಕರನ್ನು ಅನಿವಾರ್ಯವಾಗಿ ನಿರಾಕರಿಸಬೇಕಾಯಿತು.

ನಮ್ಮ ಗಣಪತಿ ಹಾಲಿನಲ್ಲಿ, ಮೊದಲನೇ ಅಂತಸ್ತಿನ ಸಭಾಂಗಣದ ಎದುರಿನಲ್ಲಿ ಮತ್ತು ಮಿನಿ ಕಾನ್ಫರೆನ್ಸ್ ಹಾಲಿನಲ್ಲಿ ದೊಡ್ಡ ರಿಪೇರಿ ಕೆಲಸ ನಡೆಯುತ್ತಿದ್ದುದರಿಂದ, ಈ ಎಲ್ಲ ಮಕ್ಕಳನ್ನು ಒಂದೇ ದಿನ ಸ್ಪರ್ಧೆಗಾಗಿ ಕರೆಯುವುದು ಅಸಾಧ್ಯವಾದ ಕಾರಣ ಜನವರಿ 10 ರಂದು ಕೇವಲ

(ಪುಟ 12ಕ್ಕೆ...)

ನೇಸರು ತಿಂಗಳೋಲೆ

ಸಂಪುಟ 43 | ಸೆಪ್ಟೆಂಬರ್ 2025 | ಸಂಚಿಕೆ 9

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್

❖ ❖ ❖

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ

❖ ❖ ❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.

❖ ❖ ❖

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವುದಾಜಿರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065

Email:
mysoreassociation.mumbai@gmail.com
Website:
www.mysoreassociation.in

ಸವಿನೆನಪುಗಳ ಮಧುರ ಅನುಬಂಧ

"ಸವಿನೆನಪುಗಳು ಬೇಕು ಸವಿಯಲೀ ಬದುಕು
ಕಹಿನೆನಪು ಸಾಕೊಂದು ಮಾಸಲೀ ಬದುಕು
ಬೆಂಬಿಡದ ಆ ನೆನಪು ಮರುಕಳಿಸಿ ದಿನವೆಲ್ಲಾ
ಕಾಡುತಿದೆ ಮನವಾ..."

ರಾಮದಾಸ ನಾಯ್ಡು ಅವರು ರಚಿಸಿರುವ ಈ ಹಾಡನ್ನು ಕೇಳಿದಾಕ್ಷಣ ಬೇಡ ಬೇಡವೆಂದರೂ ನೆನಪುಗಳ ಮೆರವಣಿಗೆ ಮನದ ಮೂಲೆಯಿಂದ ಥತ್ ಎಂದು ಕಣ್ಣೆದುರಿನ ಪರದೆಯಲ್ಲಿ ಪ್ರಕಟವಾಗಲಿಕ್ಕೆ ಶುರುವಾಗುತ್ತದೆ. ನಿಜ ಹೇಳಬೇಕೆಂದರೆ ನಮ್ಮ ಬದುಕು ನೆನಪುಗಳ ಸಂಕೋಲೆಯಲ್ಲಿ ಬಂಧಿಯಾಗಿದೆ. ಮನವನ್ನು ಕಾಡಿ ಬೇಡಿ, ಗೋಳಾಡಿಸಿ, ತೊಳಲಾಡುವ ನೆನಪುಗಳು ಎಂದೂ ಮರೆಯದ ಮಾಸದ ನೆನಪುಗಳು. ಹೌದು ನೆನಪುಗಳು ನಮ್ಮ ಬದುಕಿನ ಜೀವಾಳವೆಂದರೂ ತಪ್ಪಿಲ್ಲ. ಒಂದರ್ಥದಲ್ಲಿ ನೆನಪುಗಳು ನಮ್ಮ ಜೀವನದ ಮುನ್ನುಡಿಯಿದ್ದಂತೆ. ಕಹಿ ನೆನಪುಗಳ ಕಾಟ ಅತಿಯಾದರೆ ಕೊನೆಗೆ ಕಣ್ಣೀರಾಗಿ ಮೌನದ ಮುಖೇನ ಕರಗಿಹೋಗುತ್ತದೆ. ತಮ್ಮ ಮನದಲ್ಲಿ ಅಡಗಿರುವ ಭಾವನೆಗಳನ್ನು ಹೊರಹಾಕಲು ಪ್ರತಿಯೊಬ್ಬರು ತಮ್ಮದೇ ಆದ ದಾರಿಯನ್ನು ಆಯ್ದುಕೊಳ್ಳುತ್ತಾರೆ. ಕೆಲವರು ಮನದ ಮೂಲೆಯಲ್ಲಿ ರಾಶಿಯಾಗಿದ್ದ ನೆನಪುಗಳ ಸರಮಾಲೆಯನ್ನು ಅಕ್ಷರ ರೂಪದಲ್ಲಿ ಪಡಿಮೂಡಿಸುತ್ತಾರೆ. ಮನದ ಭಾವನೆಯನ್ನು ಹೊರಹಾಕಿದಾಗ ಕೊನೆಯಲ್ಲಿ ಸಿಗುವ ಆನಂದವೇ ಬೇರೆ.

ಬದುಕನ್ನು ಪ್ರತಿಯೊಬ್ಬರು ನೋಡುವ ರೀತಿನೇ ಬೇರೆ. ಜೀವನದಲ್ಲಿ ಆಶಾವಾದ ಇದ್ದರೆ ಜೀವನದ ಪ್ರತಿ ಅನುಭವವೂ ನಮಗೆ ಖುಷಿ ಕೊಡುತ್ತದೆ. ನಿರಾಶವಾದ ಜೀವನದಲ್ಲಿ ಇನ್ನೇನೂ ಉಳಿದಿಲ್ಲ ಇಲ್ಲಿಗೆ ಮುಗಿಯಿತು ಎನ್ನುವ ವೈರಾಗ್ಯವನ್ನು ಉಂಟು ಮಾಡುತ್ತದೆ. ಜೀವನದ ಪ್ರತಿಯೊಂದು ಹಂತದಲ್ಲೂ ಸುಖ ಸಿಗಬೇಕಾದರೆ, ಯಾವುದೇ ಪರಿಸ್ಥಿತಿಗೆ ಹೊಂದಾಣಿಕೆಯಾಗಲು ಮನಸ್ಸು ಸಿದ್ಧವಾಗಿರಬೇಕು. ಕೇವಲ ಪರಿಸ್ಥಿತಿಗೆ ಹೊಂದಿಕೊಂಡರೆ ಮಾತ್ರ ಅದು ಜೀವನ ಅಲ್ಲ. ಯಾವುದೇ ಅನಿವಾರ್ಯತೆಯಲ್ಲೂ ನಾವು ಕಂಡ ಕನಸನ್ನು ನನಸು ಮಾಡಬೇಕೆಂಬ ತುಡಿತ ನಮ್ಮಲ್ಲಿರಬೇಕು. ಮನಸ್ಸಿನಲ್ಲಿ ಅದುಮಿಹೋಗಿದ್ದ ಅಚ್ಚಳಿಯದ ನೂರಾರು ಸುಪ್ತ ನೆನಪುಗಳು ಗರಿಗೆದರಿದಾಗ ಇವತ್ತಿನ ನಮ್ಮ ಬದುಕಿನ ನೋವುಗಳೆಲ್ಲ ತೃಣಮಾತ್ರದಲ್ಲಿ ಮಾಯವಾಗುತ್ತದೆ. ಹಳೆಯ ನೆನಪುಗಳೊಂದಿಗೆ ಹೊಸ ಬದುಕನ್ನು ಕಟ್ಟಿಕೊಳ್ಳುತ್ತೇವೆ, ಹಾಗೆ ಹೊಸ ನೆನಪುಗಳಿಗೆ ನಾಂದಿ ಹಾಡುತ್ತೇವೆ.

ನೆನಪುಗಳನ್ನು ತೆರೆದಿಡುವ ಅತಿ ಆಸೆ ಈ ಕ್ಷಣಿಕತೆಯ ಬದುಕಿನಲ್ಲಿ. ಮರೆತರೂ ಮರೆಯಲಾಗದ ಅನುಭವ ಅಂದ್ರೆ ನಮ್ಮ ವಿದ್ಯಾರ್ಥಿ ಜೀವನ. ಯಾರನ್ನೇ ಕೇಳಿ 'ನಿಮ್ಮ ಜೀವನದಲ್ಲಿ ಮರೆಯಲಾಗದ ನೆನಪುಗಳು ಯಾವುವು?' ಎಂದಾಗ, ಎಲ್ಲರ ಮನ ಓಡುವುದು ಬಾಲ್ಯದ ದಿನಗಳತ್ತ, ಶಾಲಾ ಜೀವನದತ್ತ. ಅಂತರಂಗದ ಮೂಲೆಯಲ್ಲಿ ಎಡಬಿಡದೆ ಕಾಡುವ ನೆನಪುಗಳು ನಮ್ಮ ಬಾಲ್ಯದ ನೆನಪುಗಳು. ಆ ನೆನಪುಗಳನ್ನು ಮೆಲುಕು ಹಾಕಿವಾಗ ನಾವು ಮತ್ತೆ ಚಿಕ್ಕವರಾಗಿ ಉಳಿಯಬಾರದೇ ಎನ್ನುವ ಆಸೆ.

ನೆನಪಿನ ಬುತ್ತಿಯಿಂದ ನೆನಪುಗಳು ಒಂದೊಂದಾಗಿ ಎಳೆ ಎಳೆಯಾಗಿ ಬಿಚ್ಚಿಕೊಂಡಾಗ, ನಮ್ಮ ಮುಂದಿನ ಬದುಕಿಗೆ ಪ್ರೇರಣೆ ದೊರಕುತ್ತದೆ. ಮನದಲ್ಲಿ ಒಮ್ಮಲೇ ಉತ್ಸಾಹ ಪುಟಿಯುತ್ತದೆ. ನಮಗೆ ಅರಿವಿಲ್ಲದೆ ನಮ್ಮ ಮುಖದಲ್ಲಿ ನವಿರಾದ ಮಂದಹಾಸ ಹೊರಸೂಸುತ್ತದೆ. ನೆನಪುಗಳಲ್ಲಿ ಎರಡು ವಿಧ. ಒಂದು ಕೆಲವು ನೆನಪುಗಳು ಆನಂದವನ್ನು, ಉಲ್ಲಾಸವನ್ನು ತಂದುಕೊಟ್ಟರೆ, ಇನ್ನು ಕೆಲವು ನೆನಪುಗಳು ಮನಸ್ಸಿಗೆ ನೋವನ್ನು ತಂದುಕೊಡುತ್ತದೆ. ಒಮ್ಮೊಮ್ಮೆ ಕಹಿ ನೆನಪುಗಳು ಮನಸ್ಸಿಗೆ ಲಗ್ಗೆ ಇಟ್ಟಾಗ ಮತ್ತದೇ ನೋವು...ಇವುಗಳನ್ನು ಮರೆಯಬೇಕೆಂದರೂ ಮರೆಯಲಾಗದು. ಆಗ ನಮ್ಮ ಜೀವನದಲ್ಲಿ ಸಂಭವಿಸಿದ ಸಿಹಿನೆನಪುಗಳ ಮೊರೆಹೋಗಬೇಕು. ಈ ಜೀವನ ಎನ್ನುವುದೇ ಒಂದು ಮತ್ತೊಂದನ್ನು ಆಶ್ರಯಿಸಿ ಬದುಕುವುದು. ಚಪ್ಪಾಳೆ ತಟ್ಟಲಿಕ್ಕೆ ಎರಡು ಕೈಗಳು ಬೇಕೇ ಬೇಕು. ಸಮಸ್ಯೆಯಲ್ಲಿ ಪರಿಹಾರವೂ ಇದೆ ಎನ್ನುವುದನ್ನು ಮರೆಯುವಂತಿಲ್ಲ. ಹಾಗೆಯೇ ಈ ಹಳೆಯ ನೆನಪುಗಳು ಹೊಸ ಬದುಕಿಗೆ ಸಂಪರ್ಕ ಸೇತುವೆಯಾಗಿ ಕೆಲಸ ಮಾಡುತ್ತದೆ.

ಹೊಸ ಬದುಕಿಗೆ ಹಳೆಯ ನೆನಪುಗಳ ಬುನಾದಿ ಮಾಡಿಕೊಂಡು ಬದುಕನ್ನು ಸಾಗಿಸಬೇಕಾಗುತ್ತದೆ. ಯಾವುದೇ ಪರಿಸ್ಥಿತಿಯಲ್ಲಿ ಜೀವನದ ಆನಂದವನ್ನು ಕಳೆದುಕೊಳ್ಳಬಾರದು. ಬದುಕು ಪರಿಪೂರ್ಣವಾಗಬೇಕಾದರೆ ಹಳೆಯ ನೆನಪುಗಳು ಬೇಕೇ ಬೇಕು. ನೆನಪುಗಳನ್ನು ಇರೋದೇ ಸವಿಯಲಿಕ್ಕಾಗಿ ಅಲ್ಲವೇ?

– ಡಾ. ಜ್ಯೋತಿ ಸತೀಶ್

ಪ್ರವಾಸದ ಅನುಭವ ಕಥನ

✍ ಡಾ. ಸುಮಾ ದ್ವಾರಕಾನಾಥ್

ಇನ್ನೊಂದು ಮರೆಯಲಾಗದ ಪ್ರವಾಸವೆಂದರೆ ಸಿಂಗಪುರ, ಬ್ಯಾಂಗ್ ಕಾಕ್ ಮತ್ತು ಪಟಾಯ. ಸುಮಾರು 1960ನೆಯ ಇಸವಿ. ಆಗ ಪೌರ್ವಾತ್ಯ ದೇಶಗಳಿಂದ electronic ವಸ್ತುಗಳನ್ನು ಅಗ್ಗದ ಬೆಲೆಯಲ್ಲಿ, ತೆರಿಗೆ ಇಲ್ಲದೆ ನಮ್ಮ ದೇಶಕ್ಕೆ ತರಬಹುದಿತ್ತು. ಸರಿ ಎಲ್ಲಾ ಪ್ರವಾಸಿ ಏಜೆಂಟರೂ ಕಾರ್ಯತತ್ಪರರಾದರು. ಅವರ ಮನೆಯವರನ್ನಷ್ಟೇ ಅಲ್ಲದೆ ಮುಂಬಯಿಯಂತ ಊರಿನಲ್ಲಿ ಮನೆ ಕೆಲಸದವರನ್ನೂ ಕರೆದುಕೊಂಡು ಹೋಗಲು ಮೊದಲು ಮಾಡಿದರು.

ನಾವೇನು ಕಮ್ಮಿ ಎಂದು ನಮ್ಮ ದೂರದ ಬಳಗದವರಾದ ರಾವ್ travels ನವರು ನಮ್ಮನ್ನು ಹೊರಡಿಸಿದರು. ನಮಗೇನೂ ವಿಷಯ ಅಷ್ಟು ತಿಳಿಯದ್ದರಿಂದ ನಾಲ್ಕು ಜನ cousins ಹೊರೆಟೆವು. ಬೆಂಗಳೂರಿನಲ್ಲಿ ಅಮ್ಮನ ಮನೆಯಲ್ಲಿ ಮಕ್ಕಳನ್ನು ಬಿಟ್ಟು ಮತ್ತೆ ವಾಪಸ್ಸು ಮುಂಬೈಗೆ ಬಂದು ಇಲ್ಲಿಂದ cathey pacificನಲ್ಲಿ ಬ್ಯಾಂಗ್ಕಾಕ್‌ಗೆ ಹೊರೆಟೆವು. ಎಂದೂ ಕಂಡಿರದ ವಿಮಾನ ಪ್ರಯಾಣ! ವಿಮಾನದಲ್ಲಿ ಕೊಟ್ಟ ವಸ್ತುಗಳನ್ನೆಲ್ಲಾಯಾವ ಮುಲಾಜಿಲ್ಲದೆ, ಜೋಪಾನವಾಗಿ ಚೀಲಕ್ಕೆ ಸೇರಿಸಿದೆವು. ಅದಕ್ಕೇ ಭಾರತೀಯರನ್ನು ಕೀಳಾಗಿ ಕಾಣುತ್ತಿದ್ದುದು ಅನ್ನಿಸುತ್ತೆ. ಇಲ್ಲಿಯ ಮತ್ತು ಅಲ್ಲಿಯ ಸಮಯದ ವ್ಯತ್ಯಾಸವಿರುವುದರಿಂದ ಸುಮಾರು 11 ಗಂಟೆಗೆ ಬ್ಯಾಂಗ್ಕಾಕ್ ತಲುಪಿದೆವು. market ನಡುವೆ ನಮ್ಮ ರೂಮ್. ಎಲ್ಲ ಹೊಸತನ ! ರೂಮಿನಲ್ಲಿದ್ದ ಟಿವಿ ನೋಡುವ ತವಕ. ಕೆಳಗಡೆ ಕೆಟ್ಟ ವಾಸನೆ ಬರುವ ಅಲ್ಲಿಯ ಹಲಸಿನ ಹಣ್ಣಿನ ವಾಸನೆ, ಊರಲ್ಲೆಲ್ಲಾ ಮಹಿಳೆಯರದೇ ಕಾರುಬಾರು. ಪುರುಷರೆಲ್ಲಾ ಕುಕ್ಕರಗಾಲಲ್ಲಿ ಕೂತು ಆರಾಮಾಗಿ ಬೀಡಿ ಸೇದುತ್ತಾ ಕುಳಿತಿರುವ ದೃಶ್ಯ ನಮ್ಮನ್ನು ಕಾಡಿದ್ದಂತೂ ಸತ್ಯ.

ಬ್ಯಾಂಗ್ಕಾಕ್ ಥೈಲಾಂಡಿನ ರಾಜಧಾನಿಯಾಗಿ ಸದಾ ಗದ್ದಲದಿಂದ ಕೂಡಿದ ಒಂದು ದೊಡ್ಡ ನಗರ. ಅಲ್ಲಿಯ ಚಾವೋಫ್ರಾಯ ನದಿ ಊರಿನಲ್ಲೆಲ್ಲಾ ಹರಿದು ಕಾಲುವೆಗಳ ಮೂಲಕ ಸಂಪರ್ಕಸಾಧನವಾಗಿದೆ. ಅಲ್ಲಿಯ floating market ಅತ್ಯಂತ ಪ್ರಸಿದ್ಧ. ಕೊಳ್ಳುವವರು, ಮಾರುವವರೂ ನದಿಯ ಮೇಲೇ ವ್ಯವಹಾರ ನಡೆಸುವುದನ್ನು ನೋಡಿದಾಗ ನಮಗೆ ಬರೀ ರಸ್ತೆಯನ್ನು ಕಂಡವರಿಗೆ ಸೋಜಿಗವೆನಿಸಿತ್ತು. ಜೊತೆಗೆ ಅಲ್ಲಿಯ ಭವ್ಯ ಮಂದಿರಗಳೋ ನೋಡಲೇ ಚೆನ್ನ.

ಸಯಾಮಿ ರಾಜನ ಮಾಜಿ ಅರಮನೆ, ಐತಿಹಾಸಿಕ ಮಹತ್ವದೊಂದಿಗೆ ಅಲ್ಲಿಯ ಶಿಲ್ಪಕಲಾಕುಸುರಿಗೆ ಹೆಸರಾಗಿದೆ. ವಾಟ್ ಅರುಣ್ ಮಂದಿರ, (temple of dawn), ವಾಟ್ ಫೊ (temple of reclining buddha) ನೋಡಲೇ ಬೇಕಾದ ಮಂದಿರಗಳು. ಮಂದಿರದೊಳಗೆ ಪ್ರವೇಶಿಸುತ್ತಲೇ ಬೆರಗುಗೊಂಡ ಬಂಗಾರದ ಬುದ್ಧನ ಪ್ರತಿಮೆ ಅಲ್ಲಿಯ ಕಳ್ಳರನ್ನು ಹೇಗೆ ನಿಯಂತ್ರಿಸಿದೆ ಎಂದು ಆಶ್ಚರ್ಯವಾಯಿತು. ಅದನ್ನು ಬಾಯಲ್ಲಿ ಹೇಗೆ ಹೇಳುವುದು ಎನ್ನೋದು ತಿಳಿಯದೇ ಹೋಯಿತು. ಫ್ರಾಪುತ್ತಮಹಾ ಸುವನ್ನ ಪತಿಮೋಕನ್ ಎಂದು ಕರೆಯುವ ಬುದ್ಧನ ಪ್ರತಿಮೆ 9.8 ಅಡಿ ಎತ್ತರವಿದ್ದು ಸುಮಾರು 5,500 ಕೆಜಿ ತೂಕವಿದೆ. ಆ ಮಂದಿರಕ್ಕೆ ನಾವು ಕಂಡ ಹಾಗೇ ಏನೇನೂ ಭದ್ರತೆ ಇರಲಿಲ್ಲ. ಬುದ್ಧನ ಮಹಿಮೆಯೇ ಇದಕ್ಕೆ ಕಾರಣವಿರಬೇಕೆಂದುಕೊಂಡೆವು.

ಊಟ ತಿಂಡಿ ಏನೂ ರುಚಿಸದಿದ್ದರೂ ಊರು ಸುತ್ತಿ ಬಂದೆವು. ತೇರಾವಾದದ ಪ್ರಕಾರ 28 ಬುದ್ಧನ ಪುನರ್ಜನ್ಮದ ಕಥೆ ಹೇಳಿದರೆ ಮಹಾಯಾನದವರು ಬುದ್ಧನ ಅನಂತ ಜನ್ಮಗಳನ್ನು ನಂಬುತ್ತಾರೆ. ಅಂತೂ ಭಾರತದಲ್ಲಿಂದ ಪೂರ್ವದೆಡೆಗೆ ಪಯಣಿಸಿದ ಬುದ್ಧನ ಮಹಿಮೆಗಳನ್ನು ನಾವು ನೋಡುತ್ತಾ ಹೋದೆವು. ಎಲ್ಲರೂ ನಮ್ಮ ಪಟ್ಟಾಯದ ಪ್ರವಾಸಕ್ಕೆ ನಕ್ಕರೂ, ನಾವು ನೊಂದ ಮನದಿಂದ ಅಲ್ಲಿಯ ಜೀವನ ಶೈಲಿಯನ್ನು ನೋಡಿಬಂದೆವು.

ಮುಂದಿನ ಪಯಣ ಸಿಂಗಪೂರಿಗೆ. ಅಲ್ಲಿಯ ಚಾಂಗಿ ವಿಮಾನ ನಿಲ್ದಾಣದ ವೈಭವ ಕೇಳಿದ್ದರಿಂದ ಬಿಟ್ಟಕಣ್ಣು ಬಿಟ್ಟ ಹಾಗೆ ನೋಡಿದೆವು. ಇದೊಂದು ಪುಟ್ಟ ದೇಶವಾದರೂ ಮುಖ್ಯವಾದ ದ್ವೀಪದೊಂದಿಗೆ 3 ದೊಡ್ಡ ಮತ್ತು 58 ಸಣ್ಣ ಸಣ್ಣ ದ್ವೀಪಗಳನ್ನೊಳಗೊಂಡಿದೆ. ಹಾಗಾಗಿ ಅಲ್ಲಿ ದಕ್ಷಿಣ ಭಾರತೀಯರೂ, ಸಿಂಹಳದವರೂ ಮತ್ತು ಚೀನೀಯರೂ ಬಹಳ ಸಂಖ್ಯೆಯಲ್ಲಿದ್ದಾರೆ. ಸ್ವಚ್ಛತೆಗೆ ಹೆಸರಾದ ಸಿಂಗಪುರ, ಅಗ್ಗದ ಬೀದಿ ಆಹಾರಕ್ಕೂ ಹೆಸರಾಗಿದೆ. ಸಿಂಗಪುರ ಎಂಬ ಹೆಸರಿದ್ದರೂ ಅಲ್ಲಿ ಒಂದು ಸಿಂಹವೂ ಕಾಣಬರುವುದಿಲ್ಲ. ಅದು ದೇಶವಾಗಿಯೂ ಮತ್ತು ನಗರವಾಗಿಯೂ ರೂಪುಗೊಂಡಿರುವುದೊಂದು ವಿಶೇಷ. ಇನ್ನೊಂದು ವಿಶೇಷವೆಂದರೆ ಸಿಂಗಾಪುರ ಸುತ್ತಲೂ ನೀರಿನಿಂದ ಆವೃತವಾಗಿದ್ದರೂ, ಕುಡಿಯುವ ನೀರನ್ನು ಆಮದು ಮಾಡಿಕೊಳ್ಳುವ ದೇಶ. ನನಗಂತೂ 'water water everywhere but not adrop to drink ' ಎನ್ನುವ ಇಂಗ್ಲೀಷ್ ನಾಣ್ಣುಡಿ ನೆನಪಿಗೆ ಬಂತು

ಅಲ್ಲಿನ ಆರ್ಚರ್ಡ್ ರಸ್ತೆ ಶಾಪಿಂಗ್‌ಗೆ ಹೆಸರಾಗಿದೆ. ಉಳಿದಂತೆ ಪಕ್ಷಿಗಳ ಪಾರ್ಕ್, ಸೆಂಟೋಸಾ ದ್ವೀಪ, ಅಲ್ಲಿನ ಮೇಣಬತ್ತಿಯ ಮಾಡೆಲ್‌ಗಳು, ಯೂನಿವರ್ಸಲ್ ಸ್ಟೂಡಿಯೋ ಅದೆಲ್ಲಾ ನಮಗೆ ಬೇರೆ ಲೋಕವನ್ನೇ ಸೃಷ್ಟಿಸಿದ್ದವು. ಸೆಂಟೋಸಾಗೆ ಹೋಗಲು ಕೇಬಲ್ ಕಾರ್, ಪ್ರವಾಸಿಗಳಿಗೊಂದು ಆಕರ್ಷಣೀಯವಾಗಿದ್ದು ಸುಮಾರು 100 ಕ್ಯಾಬಿನ್‌ಗಳು (ಮೌಂಟ್ ಫೇಬರ್‌ನಿಂದ ಸೆಂಟೋಸಾಗೆ) 5 ಕಿ.ಮೀ. ದೂರವನ್ನು ಕ್ರಮಿಸುತ್ತಿತ್ತು. ನಮಗೆ

ಇದೆಲ್ಲಾ ಕನಸೋ ನನಸೋ ತಿಳಿಯದಂತಾಗಿತ್ತು. ಸೆರಂಗೂನ್ ರಸ್ತೆಯಲ್ಲಿನ ಶಾಪಿಂಗ್ ಹುಚ್ಚೆದ್ದು ಕುಣಿಸಿತ್ತು. ಆದರೆ ನಮ್ಮ ಕೈ ಕಟ್ಟಿದ್ದು ಟ್ರಾವೆಲ್ಸ್ ನವರ ಲಗ್ಗೇಜ್ ಒಯ್ಯಬೇಕಾದ್ದರಿಂದ, ನಾವು ನಮ್ಮ ಖರೀದಿಯನ್ನು ಮಿತಿಗೊಳಿಸಬೇಕಾಗಿತ್ತು. ಬರೀ ನೋಟ ನೋಡಿ ಕಣ್ಣಿಗಷ್ಟೇ ತಂಪು ಮಾಡಿಕೊಂಡು ಬಂದೆವು.

ಯೂನಿವರ್ಸಲ್ ಅನುಭವ ಹೇಳೋದಾದ್ರೆ, ಕೈಲಾಸಂನ ಬೋರೇಗೌಡನ ತರಹ ರೋಲರ್ ಕೋಸ್ಟ್ ರದೇ ಆಗಲೀ, ಹಾರರ್ ರೈಲಾಗಲೀ ಹೆದರಿಕೆಯಿಂದ ಕಿರಿಚಿ, ಕಿರಿಚಿ ಅನುಭವ ಪಡೆದೆವು. ಅಲ್ಲಿಯ ಇನ್ನೊಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಾವೆಲ್ಲರೂ ತುಂಬಾ ಇಷ್ಟಪಟ್ಟೆವು. ಅಲ್ಲಿಯ ಥಳಕು ಬಳುಕಿನ ಸುಂದರಿಯರ ನೃತ್ಯ ಮನಸ್ಸಿಗೆ ಮುದ ಕೊಟ್ಟಿತು. ಕೈ ಉಗುರುಗಳಿಗೆ ಹಾಕಿದ್ದ ಸುಂದರ ಆಭರಣಗಳು, ಅವರ ಕಿರೀಟ, ಹಿತವಾದ ರಂಗುರಂಗಿನ ವೇಷಭೂಷಣ ದಿವ್ಯ ಲೋಕವನ್ನು ಸೃಷ್ಟಿಸಿದ್ದವು. ಅಲ್ಲಿಯ ಕುಬೇರ, ಬ್ರಹ್ಮ ಎಂಬ ಹೆಸರುಗಳನ್ನೋದಿ ನಮ್ಮದೇ ಎಂದು ಸಂಭ್ರಮಪಟ್ಟೆವು.

ಇದರ ನಂತರದ್ದೇ ಇನ್ನೊಂದು ನಾಟಕ. ನನ್ನ ಕಸಿನ್ ತುಂಬು ಉತ್ಸಾಹದಿಂದ ತೆಗೆದಿದ್ದ ಫೋಟೋ ರೀಲ್ ಹೇಗೆ ಮಾಯವಾಯಿತೋ ಗೊತ್ತಿಲ್ಲ. ಮುಂದೆ ನಮ್ಮನ್ನೆಲ್ಲಾ ಸಿಂಗಾಪುರ ವಿಮಾನದಲ್ಲಿ ಚೆನ್ನೈನಲ್ಲಿ ಇಳಿಸಲಾಯ್ತು. ಒಬ್ಬೊಬ್ಬರಿಗೆ ಅವರವರ ಮಿತಿಯ ಲಗ್ಗೇಜ್ ಒಪ್ಪಿಸಲಾಯಿತು. ನಮ್ಮನ್ನು ಕಸ್ಟಮ್ಸ್ ಆಫೀಸರ್ ಜೊತೆಗೆ ಬಿಟ್ಟು, ಟ್ರಾವೆಲ್ ಏಜೆಂಟ್ ತನ್ನ ಪಾಡಿಗೆ ತಾನು ಹೊರಟುಹೋದ. ಹಣ ಕಟ್ಟದ ಹೊರತು ಸಾಮಾನುಗಳ ಬಿಡುಗಡೆ ಇಲ್ಲವೆಂದು ಕಸ್ಟಮ್ಸ್ ಗಲಾಟೆ. ನಮಗೋ, ನಮ್ಮನ್ನೆಲ್ಲಿ ಒಳಗೆ ಹಾಕ್ತಾರೋ ಎನ್ನುವ ಹೆದರಿಕೆ. ನಿಮಗೆ ಯಾಕೆ tension? ನೀವು ಮುಂದೆ ಹೋಗಿ, ಅವರು ಸಾಮಾನು ಬಿಡಿಸಿಕೊಳ್ಳಲು ಬಂದೇ ಬರುತ್ತಾರೆ ಅಂತ ಆಫೀಸರ್ ಗಳ ಹಾಸ್ಯ. ಅಂತೂ ಇವರಿಬ್ಬರ ತಾಕಲಾಟದಲ್ಲಿ, ಹೊಟ್ಟೆ ಹಸಿವಿನೊಂದಿಗೆ ಹೊರಗೆ ಬಂದರೆ ಸಾಕಪ್ಪಾ ಎಂದು ಕಾಯುತ್ತಾ ಕೂತೆವು .ಒಬ್ಬರಲ್ಲ ಇಬ್ಬರಲ್ಲ, ಎಲ್ಲರ ಸಾಮಾನು collect ಮಾಡಿ ನಮ್ಮನ್ನು ಒಂದು ವ್ಯಾನ್‌ನೊಳಗೆ ತುಂಬಿಸಿ ಬೆಂಗಳೂರಿಗೆ ಕಳಿಸಿದರು. ಮನೆ ತಲುಪುವ ತನಕ ಪ್ರವಾಸದ ಆನಂದವೆಲ್ಲಾ ಕುಗ್ಗಿ, ಮತ್ತೆ ಚೇತರಿಸಿಕೊಂಡೆವೆಂದು ಹೇಳಬೇಕಾಗಿಲ್ಲ. ಪ್ರವಾಸದ ಹುಚ್ಚು ಇಷ್ಟು ತೀರ ಬೇಕಾಗಿತ್ತೇ ಎಂದು ಈಗ ಎನಿಸುತ್ತಿದೆ.

How will India react if Trump starts a trade war with India?

Like how we did in 1965.

At time during conflict with Pakistan, US threatened India to stop our food aid. At that time our PM, Lal Bahadur Shastri ji requested every Indian to give up their one time of meal and stand united against foreign threat and power.

At that time, we all ate very limited food. The Association's Mess served very frugal food to all of us. All Restaurants in Mumbai offered Rice only on TWO days.

That time the president of US was not Trump. Trump is just a symptom. US itself is the conflict. It has ceased to function as a serious country, and it's in every nation's best interest now to minimize dealings with the USA and find alternatives

Let's stand together again, irrespective of ideology and religion, to show Donald Trump what's the world's oldest surviving civilization is made up of.

ಸರೋವರ

✍ ಉಮಾ ರಾವ್

(ಕಳೆದ ಸಂಚಿಕೆಯಿಂದ...) **(ಉಮಾ ರಾವ್ ಕಥೆಗಳು)**

ದಿನಾ ಭೇಟಿಯಾಗುತ್ತಿದ್ದರಿಂದ "ಹಾಯ್" "ಹಲೋ, "ಇವತ್ತು ಚಳಿ ಜಾಸ್ತಿ..." ಇಂದ ಪ್ರಾರಂಭವಾದ ಸಂಬಂಧ ಸಣ್ಣ ಸಂಭಾಷಣೆಗೆ ತಿರುಗಿತ್ತು.

"ನನ್ನ ಹೆಸರು ಕೆಲ್ಲಿ" ನಗುನಗುತ್ತಾ ಕೈ ಚಾಚಿದ್ದಳು ಆಕೆ ಒಂದು ದಿನ.

"ನಾನು ಕಮಲ"

"ಇವರಿಬ್ಬರು ನನ್ನ ಮಕ್ಕಳು.... ನೀನಾ, ಶಾಂತಿ...

"ಓ... ಶಾಂತಿ!"

"ಹೌದು... ನೀವು ಹೇಳ್ತೀರಲ್ಲ ಹಾಗೆ, ಓಂ ಶಾಂತಿ, ಶಾಂತಿ, ಶಾಂತಿ"

"ಪ್ಲೀಸ್"

"ಎಸ್, ಪ್ಲೀಸ್!"

ಅದುವರೆಗೂ ಇವಳನ್ನೇ ನೋಡುತ್ತಾ, ಟೆಡ್ಡಿ ಬೇರ್ ಎದೆಗವಚಿ ನಿಂತಿದ್ದ ಶಾಂತಿ ಇವಳು ಬಂದು ತನ್ನ ಪುಟ್ಟಿ ಕೈಯಿಂದ ಇವಳ ಕೈ ಸವರಿದಳು.

ನಗುತ್ತಾ "ಯೂ ಆರ್ ಲೈಕ್ ಮೀ" ಎಂದಳು.

ಎಲ್ಲರೂ ಗೊಳ್ಳೆಂದು ನಕ್ಕರು.

ಕೆಲಿ, "ನಡೀರಿ, ಹೋಗೋಣ. ಹೊತ್ತಾಗಿ ಹೋಗುತ್ತೆ" ಎಂದು ಅವರನ್ನು ದೋಣಿ ಯತ್ನ ನಡೆಸಿಕೊಂಡು ಹೋಗಿದ್ದಳು. ಇಬ್ಬರು ಹುಡುಗಿಯರೂ "ಬಾಯ್" ಎಂದು ಕೈ ಬೀಸುತ್ತಾ ಪುಟು ಪುಟು ಹೆಜ್ಜೆ ಹಾಕಿದ್ದರು.

*****

ನೀಲಿ ಜೀನ್ಸ್ ಟೀ ಶರಟಿನಲ್ಲೋ, ಕಪ್ಪು ಈಜುಡುಗೆಯಲ್ಲೋ ದಿನಾ ಬರುತ್ತಿವ ಆಕೆ, ಮೊದಲು ತನ್ನ ವ್ಯಾನಿನ ಹಿಂದೆ ಕಟ್ಟಿಕೊಂಡು ಬಂದಿದ್ದ ದೋಣಿಯನ್ನು ಇಲ್ಲಿ ಇಳಿಸಿ, ವ್ಯಾನ್ ಪಾರ್ಕ್ ಮಾಡಿ ಬರುತ್ತಿದ್ದಳು. ನಂತರ ಪ್ರಾರಂಭವಾಗುತ್ತಿತ್ತು. ನೀರಿ ನಂಚಿನಲ್ಲಿದ್ದ ದೋಣಿಯನ್ನು ಸರೋವರಕ್ಕೆ ಇಳಿಸುವ ಕಾಯಕ, ಆ ಕಲೆಯಲ್ಲಿ ಅವಳಿಗಿದ್ದ ಪರಿಣತಿ ಕಂಡು ಇವಳಿಗೆ ಅಚ್ಚರಿಯಾಗುತ್ತಿತ್ತು. ಅದರಲ್ಲಿ ಮೂವರದೂ ಸಮಾನ ಪಾತ್ರ.

"ಹ್ಞೂಂ ಇಲ್ಲಿ ಹಿಡಿ... ಹಗ್ಗ ಎಳಿ... ಹಾಗೇ ಇಟ್ಟುಕೋ... ಓಕೆ..." ಎಂಬ ಕೂಗುತ್ತಾ ಅವಳು ತನ್ನ ಶಕ್ತಿಯೆಲ್ಲಾ ಉಪಯೋಗಿಸಿ ದೋಣಿಯನ್ನು ನೀರಿಗಿಳು ಭರ್ರೆಂದು ಸ್ಟಾರ್ಟ್ ಮಾಡಿದಾಗ ಮಕ್ಕಳು "ಹೋ" ಎಂದು ಕೂಗುತ್ತಾ ಚಪ್ಪಾಗಿ ತಟ್ಟುತ್ತಿದ್ದರು. ಬಿಸಿಲಿನಲ್ಲಿ ಸುಟ್ಟ ಅವಳ ದೇಹ ಚಲಿಸುವ ರೀತಿ, ಅವಳ ಮಾಂಸಖಂಡಗಳ ಸೆಟೆದುಕೊಳ್ಳುವ ರೀತಿ ಇವಳನ್ನು ಚಕಿತಗೊಳಿಸುತ್ತಿದ್ದವು. ದೋಣಿ ಟುಕುಟುಕು ಮಾಡುತ್ತಾ ಸರೋವರದಲ್ಲಿ ಮುಂದೆ ಹೋದಂತೆ ಅವರೆಲ್ಲರೂ ಇವಳತ್ತ ಕೈ ಬೀಸುತ್ತಿದ್ದರು. ತೀರದಿಂದ ದೂರ ಹೋದಂತೆ ಅವರು ಸರೋವರದಲ್ಲಿ ಪ್ರತಿಬಂಬಗಳಾಗಿ, ತಮ್ಮ ದೋಣಿಯೇ ಸೃಷ್ಟಿಸಿದ ಉಂಗುರಗಳಲ್ಲಿ ಕಲೆತು ಒಂದಾಗಿ ಮುಂದೆ ಹೋಗುತ್ತಿದ್ದರು. ಅವರು ಕಾಣೆಯಾಗುವವರೆಗೂ ಇವಳು ಕೈ ಬೀಸುತ್ತಲೇ ಇರುತ್ತಿದ್ದಳು.

ಇವಳು ನೋಡುನೋಡುತ್ತಲೇ ಆಗಸ ಕೆಂಬಣ್ಣಕ್ಕೆ ತಿರುಗುತ್ತಿತ್ತು. ಹಕ್ಕಿಗಳ ಚಿಲಿಪಿಲಿ ಹೆಚ್ಚಾಗುತ್ತಿತ್ತು. ಮಿಣುಕು ಹುಳುಗಳ ರೋಮಾಂಚಕ ನೃತ್ಯ ಆರಂಭವಾಗುತ್ತಿತ್ತು. ಸರೋವರದೊಳಗೆ ಮೆಲ್ಲನೆ ಆಡುವ ಕಪ್ಪು ನೆರಳುಗಳ ಮಡಿಲಲ್ಲಿ ಮಿಣುಕುವ ಬಣ್ಣ ಬಣ್ಣದ ದೀಪಗಳು ಒಂದು ಮಾಂತ್ರಿಕ ವಾತಾವರಣ ಸೃಷ್ಟಿಸಿ ಅವಳ ಮೇಲೆ ಮೋಡಿ ಹಾಕುತ್ತಿದ್ದವು. ಆ ಕ್ಷಣ ಇವಳ ಅಂತರಂಗದ ಎಲ್ಲಾ ಅಲೆಗಳೂ ಶಾಂತವಾಗಿ ತನ್ನ ಭೂತ ಭವಿಷ್ಯಗಳೇ ಇಲ್ಲದಂತಾಗಿ, ಅವಳು ಈ ಸ್ಪೇಸ್‌ನ ಒಂದು ತುಣುಕು ಮಾತ್ರ ವಾಗುತ್ತಿದ್ದಳು. ಹಿತವಾದ ತಂಗಾಳಿ ನೇವರಿಸಿದಂತೆ, ಅವಳ ಅದುವರೆಗಿನ ಬದುಕೆಲ್ಲವೂ ಹಿಂದೆ ಸರಿಯುತ್ತಿತ್ತು. ಮುಂಬೈ ಕೂಡ.

*****

ಚೆಂಬೂರಿನಲ್ಲಿದ್ದ ಪ್ರೇಮ್ ಸಾಗರ್ ಬಿಲ್ಡಿಂಗಿನ ಹನ್ನೊಂದನೇ ನಂಬರ್ ಫ್ಲಾಟ್. ಎರಡು ರೂಮು, ಕಿಚನ್, ಬಾಲ್ಕನಿ, ಟಾಯ್ಲೆಟ್. ಇಪ್ಪತ್ತೈದು ವರ್ಷ. ಬೆಳಗ್ಗೆ 8 ಗಂಟೆಗೇ ಒಳನುಗ್ಗುವ ಮನೆ ಕೆಲಸದ ಬಾಯಿ. ಅವಸರದಿಂದ ತಯಾರಿಸಬೇಕಾಗಿದ್ದ ಎರಡು ಊಟದ ಡಬ್ಬ.

ಪಲ್ಯ-ಚಪಾತಿ, ಬ್ರೇಕ್‌ಫಾಸ್ಟಿಗೆ ಯಾವಾಗಲೂ ಬ್ರೆಡ್ಡೇ.

ಮಗಳನ್ನು ಸ್ಕೂಲ್ ಬಸ್ ಹತ್ತಿಸಿ, ತಾನು ಪಾರ್ಟ್ ಟೈಂ ಕೆಲಸದ ಕಾಲೇಜು ತಲುಪಲು ಹಿಡಿಯಬೇಕಿದ್ದ 12.21ರ ಲೋಕಲ್. ಐದೂವರೆಗೆ ಮನೆ ಮುಟ್ಟುತ್ತಲೇ ಸ್ನಾನ, ಚಹಾ. ಮತ್ತೆ ಅಡಿಗೆ ಮನೆ ಪ್ರವೇಶ, ಮಗಳೊಡನೆ ಹರಟೆ, ದಣಿದ ದೇಹಕ್ಕೆ ಮೆತ್ತನೆಯ ಹಾಸಿಗೆಯ ಸುಖ. ಸೋರಿ ಹೋಗಿತ್ತು ವರ್ಷಗಳು.

ನಾಲ್ಕು ವರ್ಷದ ಮಗುವಿನೊಂದಿಗೆ ಅಂದು ಅಗ್ಸಾ ಬೀಚಿಗೆ ತಾವು ಪಿಕ್ನಿಕ್ ಹೋಗಿದ್ದಾಗ, ಬೇಡಬೇಡವೆಂದರೂ ಕೇಳದೆ "ಅಪಾಯ"ದ ಬೋರ್ಡಿನತ್ತ ಗಮನ ಕೊಡದೆ ಈಜಲು ಹೋದ ಗಂಡ ಸುರೇಶ ಮರಳಿ ಬಂದಿರಲಿಲ್ಲ. ಅಂದಿನಿಂದ ಒಂಟಿ ಪಯಣ. ಕಿರುಬೆರಳು ಹಿಡಿದು ಜತೆಗೇ ನಡೆದು ಬಂದಿದ್ದಳು ಮಗಳು.

*****

ತನ್ನದೆಂಬುವ ಗಳಿಗೆಗಳು ಎಲ್ಲಿತ್ತು ಅವಳಿಗೆ?

ಮಾಥೆರಾನ್‌ಗೆ ಹೋಗಿ ದಟ್ಟ ಮರಗಳ ನೆರಳಲ್ಲಿ ನಡೆಯುತ್ತಾ ಕಾಡಿನ ಮೌನದಲ್ಲಿ ಕರಗಿಹೋಗಬೇಕು.

“ಅಮ್ಮಾ, ಎಸ್ಸೆಲ್‌ವರ್ಲ್ಡ್‌ಗೆ ಹೋಗೋಲ್ವಾ? ಅಲ್ಲಿ ರೈಡ್ಸ್ ತುಂಬಾ ಇದೆಯಂತೆ."

ದಿನವೆಲ್ಲಾ ಅಡ್ಡಾಗಿ ಮೆಹದಿ ಹಸನ್ ಗಜಲ್‌ಗಳನ್ನು ಕೇಳಬೇಕು.

"ಅಮ್ಮಾ, ಕಾರ್ಟೂನ್ ಚಾನೆಲ್ ಹಾಕ್ಲಾ?"

*****

ಬೆಳಗ್ಗೆ ಆಲಾರಂನ ಆತಂಕವಿಲ್ಲದೆ ಕಣ್ತುಂಬ ನಿದ್ದೆ ಮಾಡಬೇಕು.

"ಅಮ್ಮಾ. ನನ್ನ ಫ್ರೆಂಡ್ಸ್ ಎಲ್ಲಾ ಬರಿದಾರೆ ಬೆಳಗ್ಗೆ ನಮ್ಮನೇಗೆ. ಅವರಿಗೆ ಇಲ್ಲಿ ಊಟ ಮಾಡಿ ಅಂತ ಹೇಳ್ತಾ?"

ಎಷ್ಟೊಂದು ದಣಿವು ಇವತ್ತು. ಒಂಬತ್ತಕ್ಕೆ ಮಲಗಿಬಿಡಬೇಕು.

"ಅಮ್ಮಾ, ನಾನು ಚ್ಯಾಪ್ಟರ್ ಮುಗಿಸೋವರೆಗೂ ಜೊತೆಗೆ ಕೂತಿದ್ದೀಯಾ? ಇಲ್ಲದಿದ್ದರೆ ನಿದ್ದೆ ಬಂದ್ಬಿಡುತ್ತೆ... ನಾಳೆ ತುಂಬಾ ಟಫ್ ಪೇಪರ್..."

*****

ಇವತ್ತಿಂದ ಇಬ್ಬರಿಗೂ ರಜಾ. ಎಲ್ಲಾದರೂ ತಿರುಗಾಡಿ ಬರಬೇಕು.

"ಅಮ್ಮಾ, ನೀನ್ಯಾಕೆ ಎಂದೂ ನನ್ನನ್ನು ಬೀಚಿಗೆ ಕರೆದುಕೊಂಡು ಹೋಗೋದಿಲ್ಲ ಸಮುದ್ರಾಂದ್ರೆ ನಂಗೆಷ್ಟು ಇಷ್ಟ ಗೊತ್ತಾ?!"

*****

ಅಂದಿನ ಸಮುದ್ರದ ಕೌರ, ಮುಂಬೈ ಬದುಕಿನ ಒಂಟಿತನ. ಆ 400 ಚದರಡಿ ಫ್ಲಾಟಲ್ಲಿ ಉಳಿದುಹೋಗಿರುವ ಬಿಸಿಯುಸಿರುಗಳು... ಎಲ್ಲವನ್ನೂ ಕ್ಷಣದಲ್ಲಿ ತನ್ನಾಳದಲ್ಲಿ ಅಡಗಿಸಿಟ್ಟುಕೊಂಡು ಶಾಂತಿ, ಮೌನ, ತಂಪುಗಳ ಹೊದಿಕೆ ಎಳೆಯುತ್ತಿತ್ತು ಆ ಸರೋವರ ಪ್ರತಿದಿನ.

*****

ಇಂದವಳು ಸರೋವರದೆದುರು ಬಂದು ಕೂತಾಗ ಏಕೋ ಇದು ಪ್ರತಿದಿನದಂತಿಲ್ಲ ಎನ್ನಿಸಿತು. ಖಾಲಿಯಾಗಿದ್ದ ಬೋಟ್ ಶಾಪ್. ತೀರದಲ್ಲೇ ಮಂಕಾಗಿ ಕೂತಿದ್ದ ದೋಣಿಗಳು, ಸ್ತಬ್ಧ ಸರೋವರ. ಸ್ವಲ್ಪ ದೂರದಲ್ಲಿದ್ದ ಮೇಪಲ್ ಮರದ ಕೆಳಗೆ ನಿಂತಿದ್ದ ಸಣ್ಣ ಗುಂಪೊಂದನ್ನು ಕಂಡು ಅಲ್ಲಿಗೆ ನಡೆದು ಹೋದಳು. ಮೌನವಾಗಿ ತಲೆ ಕೆಳಗೆ ಹಾಕಿ ನಿಂತಿದ್ದ ಜನ. ಮರದ ಕೆಳಗೆ ರಾಶಿ ರಾಶಿ ಹೂಗುಚ್ಛಗಳು. ಅದರ ನಡುವೆ ಒದ್ದೆ ಮುದ್ದೆಯಾಗಿದ್ದ ಗುಲಾಬಿ ಟೆಡ್ಡಿ ಬೇರ್. ಎಲ್ಲೆಲ್ಲೂ ಸ್ಮಶಾನ ಮೌನ.

*****

ತನ್ನ ಅನುಮಾನ ನಿಜವಾಗಿ ಬಿಟ್ಟರೆ ಎಂಬ ಭಯದಿಂದ ಅತ್ತ ತಿರುಗಿದಾಗ ಸ್ವಲ್ಪ ದೂರದಲ್ಲಿ ಮತ್ತೊಂದು ಹೆಂಗಸರ ಗುಂಪು. ಎಲ್ಲರೂ ದಿನಾ ಸಿಕ್ಕುತ್ತಿದ್ದವರೇ. ಇವಳನ್ನು ಕಂಡ ತಕ್ಷಣ ತಲೆ ಆಡಿಸಿ "ವೆರಿ ಸ್ಯಾಡ್" ಎಂದರು. ಇವಳು ಒಂದು ಕ್ಷಣ ಅಲ್ಲೇ ನಿಂತಳು. ಕೆಳದನಿಯಲ್ಲೇ ಮಾತುಕತೆ ನಡೆಯುತ್ತಿತ್ತು.

"ಇದು ಹೇಗಾಯಿತು?"

"ನಿನ್ನೆ ನಾನು ಬಂದಿರಲಿಲ್ಲ. ಇಂಡಿಪೆಂಡೆನ್ಸ್ ಡೇ ಫಯರ್ ವರ್ಕ್ಸ್ ನೋಡೋಕೆ ಹೋಗಿದ್ವಿ"

"ಆ ಸಮಯದಲ್ಲೇ ಆಗಿದ್ದು"

"ಲೇಕ್ ಎದುರು ಎಲ್ಲರೂ ಹಾಲಿಡೇಂತ ಸೇರಿದ್ದರಂತೆ. ಇದ್ದಕ್ಕಿದ್ದಂತೆ ಎಲ್ಲೋ ಶುರುವಾದ ಪಟಾಕಿಗಳು, ಆಕಾಶದಲ್ಲಿ ಬಣ್ಣಬಣ್ಣದ ಬೆಳಕು ತುಂಬಿದಾಗ, ಎಲ್ಲರೂ ಮೈಮರೆತು ಅದನ್ನೇ ನೋಡುತ್ತಿದ್ದಂತೆ. ಈ ಹುಡುಗಿಯೂ ನೋಡು ನೋಡುತ್ತಾ ಒಂದೆರಡು ಹೆಜ್ಜೆ ಹಿಂದೆ ಸರಿದಿರಬೇಕು. ಶಿ ಹ್ಯಾಡ್ ವಾಕ್ಸ್ ಇನ್‌ಟು ದ ಲೇಕ್! ಲೇಕ್ ನೊಳಗೆ ನಡೆದೇ ಬಿಟ್ಟಿದ್ದಳು. ಅವರಮ್ಮ ನೋಡೋ ಹೊತ್ತಿಗೆ ಇಟ್ ವಾಸ್ ಟೂ ಲೇಟ್. ಎಷ್ಟೋ ಜನ ನೀರಿನಲ್ಲಿ ಧುಮುಕಿದರು. ಏನೂ ಪ್ರಯೋಜನವಾಗಲಿಲ್ಲ..."

ಇಬ್ಬರು ಹುಡುಗಿಯರು ಬರೋರು ದಿನಾ... ವಿಚ್ ಒನ್... ಯಾವ ಹುಡುಗಿ...?"

"ಅದು... ಐ ಮೀನ್.. ದ ಒನ್ ವಿದ್ ದ ಪಿಂಕ್ ಟೆಡ್ಡಿ ಬೇರ್!"

ಅವಳಿಗೆ ಹೊಟ್ಟೆ ತೊಳೆಸಿದಂತಾಗಿ ಅಲ್ಲಿಂದ ಮಾತಿಲ್ಲದೆ ನಡೆದಿದ್ದಳು. ಮೆಲ್ಲಗೆ ಸರೋವರದತ್ತ ದೃಷ್ಟಿ ಹಾಯಿಸಿದಾಗ, ವಿಚಿತ್ರ ಆಕ್ರೋಶ ಅವಳನ್ನು ಆವರಿಸಿತ್ತು.

*****

ಮನೆಗೆ ಬಂದು ಶೂ ಬಿಚ್ಚುತ್ತಿರುವಾಗಲೇ ಮಗಳು ಬಂದು ಎದುರಿಗೆ ಕೂತಳು. ಅದೇಕೋ ಮೊಮ್ಮಗು ಅಂದು ರಚ್ಚೆ ಹಿಡಿದಿತ್ತು. "ಅಮ್ಮ, ಈಗ ತಾನೇ ನ್ಯೂಸ್‌ನಲ್ಲಿ ನೋಡಿದ್ವಿ. ನಿನ್ನೆ ನಮ್ಮ ಲೇಕ್‌ನಲ್ಲಿ ಒಂದು ಪುಟ್ಟ ಹುಡುಗಿ ಮುಳುಗಿ ಹೋಯ್ತಂತಲ್ಲ..."

"ಹೂಂ"

"ನಿಂಗೊತ್ತಿರಬೇಕು... ನೀನು ಹೇಳಿದ್ಯಲ್ಲಾ ಇಬ್ಬರು ಹುಡುಗಿಯರು ತಾಯಿ ಜೊತೆ ಬರ್ತಾರೆ... ಒಂದು ವೈಟ್ ಚೈಲ್ಡ್, ಒಂದು ಇಂಡಿಯನ್ ಅಂತ..."

"ಹೂಂ"

"ಟೀವಿಲಿ ಹೇಳಿದ ಪ್ರಕಾರ... ಆ ಸಾಕುಮಗಳಿದ್ದ ಹಾಗಿತ್ತು... ವಸ್ ಇಟ್ ದ ಫಾಸ್ಟರ್ ಡಾಟರ್?"

"ಫಾಸ್ಟರ್ ಡಾಟರ್! ಯಾವ ಮಗು ಆದ್ರೇನು... ಹೌ ಡಸ್ ಇಟ್ ಮೇಕ್ ಅ ಡಿಫರೆನ್ಸ್... ಒಂದು ಮಗು ಹೋಯ್ತು ಅನ್ನೋದಷ್ಟೇ ದುರಂತ ಅಲ್ವಾ?" ಎಂದವಳೇ ಅಲ್ಲಿಂದ ಅವಳು ಧಡಕ್ಕನೆ ಎದ್ದು ಹೋದಳು. ತಾಯಿಯ ಧ್ವನಿಯಲ್ಲಿ ಎಂದೂ ಕಾಣದಿದ್ದ ಗಡಸುತನ ಕಂಡು ಮಗಳು ಅವಾಕ್ಕಾದಳು.

*****

ನಂತರ ಸರೋವರದತ್ತ ಅವಳು ತಿಂಗಳುಗಳೇ ಹೋಗಿರಲಿಲ್ಲ. ಅವಳ ಮನಸ್ಸು ಅರಿತ ಮಗಳೂ ಬಲವಂತ ಮಾಡಿರಲಿಲ್ಲ.

*****

ದಿನಗಳು ಉರುಳಿ ಚಳಿಗಾಲ ಬಂದಿತ್ತು. ಕೋರೆವ ಚಳಿಗಾಲ ಹುಲ್ಲಿನ ಹಮ್ಮಿ ಸ್ಥಳದಲ್ಲಿ ಹಿಮದ ಹಾಸು, ಎಲೆಯುದಿರಿಸಿ ನಿಂತ ಮರಗಳು. ಅವುಗಳ ಮೇಲ ಕೂತ ಹಿಮ. ರೆಂಬೆಗಳ ತುದಿಯಲ್ಲಿ ಕರಗಿ ಇನ್ನೇನು ಜಾರಿ ಬೀಳಲಿರುವ ನೀರ ಹನಿಗಳು ಹಾಗೇ ಹೆಪ್ಪುಗಟ್ಟಿ ಏಳು ಬಣ್ಣಗಳನ್ನು ಪ್ರತಿಫಲಿಸುತ್ತಿದ್ದವು. ಮನೆಗಳು ಬಿಸಿ ಛಾವಣಿಗಳನ್ನು ಹೊತ್ತಿದ್ದುವು.

ಅಲ್ಲಿನ ಲೆಕ್ಕಚಾರದ ಪ್ರಕಾರ ಅದು ವಾರ್ಮ್ ಡೇ! ಚಳಿ ಕೊರೆಯುತ್ತಿದ್ದರೆ ಬಿಸಿಲಿತ್ತು.

ಅಂದು ಅವಳು ಸಾಕಷ್ಟು ಬೆಚ್ಚನೆಯ ಉಡುಪು ಧರಿಸಿ–

"ಒಂದು ಸಣ್ಣ ರೌಂಡು ಹೋಗಿ ಬಂದು ಬಿಡ್ತೀನೀಂತ" ಮಗಳಿಗೆ ಹೇಳಿ ಹೊರಟಳು.

"ಹುಷಾರು, ಜಾರಿಗೀರೀಯ" ಎಂದು ಕೂಗಿದ ಮಗಳಿಗೆ ಹೂಂಗುಟ್ಟುತ್ತಾ, ತನಗರಿವಿಲ್ಲದಂತೆಯೇ ಸರೋವರದತ್ತ ಕಾಲು ಹಾಕಿದಳು.

ಅಲ್ಲಿ ಬಂದು ನಿಂತಾಗ ಅವಳು ಚಕಿತಳಾದಳು. ಶೀತದಿಂದ ಪೂರ್ತಿ ಹೆಪ್ಪುಗಟ್ಟಿ ಬಿಳಿ ಹಲಗೆಯಾಗಿತ್ತು ಅವಳ ಸರೋವರ. ಅದರ ಮೇಲೆ ಬಣ್ಣಬಣ್ಣದ ಬಟ್ಟೆಗಳ ಪುಟಾಣಿಗಳು ಹೋ ಎಂದು ಕೂಗುತ್ತಾ, ಸ್ಕೇಟ್ ಮಾಡುತ್ತಾ ಗುಂಡುಗುಂಡಗೆ ಸುತ್ತುತ್ತಿದ್ದರು. ಹೆಪ್ಪುಗಟ್ಟಿದ ಸರೋವರದ ಐಸಿನಲ್ಲಿ ರಂಧ್ರ ಕೊರೆದು, ಅದರ ಮೂಲಕ ಮೀನು ಹಿಡಿಯುತ್ತಿದ್ದರು ಎಷ್ಟೋ ಜನ. ಸ್ವಲ್ಪ ದೂರದಲ್ಲೇ ತರುಣರಿಬ್ಬರು ಐಸ್ ಸುಂದರ ಪ್ರತಿಮೆಗಳನ್ನು ಮಾಡುತ್ತಿದ್ದರು. ಗರಿಗೆದರಿ ನಿಂತ ಪಕ್ಷಿಗಳು! ಹಬೆಯಾಡುವ ಕಾಫಿ ಕುಡಿಯುತ್ತಾ ಜನ ಅದನ್ನೇ ನೋಡುತ್ತಿದ್ದರು. ಬಣ್ಣಬಣ್ಣದ ಕೋಟು ತೊಟ್ಟ ನಾಯಿಗಳು ಒಡತಿಯರ ಹಿಂದೆ ಮುಂದೆ ಓಡಾಡುತ್ತಿದ್ದುವು. ಎಲ್ಲೆಲ್ಲೂ ಹಬ್ಬದ ವಾತಾವರಣ ತುಂಬಿ ಹೋಗಿತ್ತು.

ಅವಳು ಅಂದಿನ ಚಿತ್ರವನ್ನು ನೋಡುತ್ತಾ ಕಣ್ಮುಚ್ಚಿದಳು. ಇಂದಿನ ಸರೋವರಕ್ಕೆ ಅಂದಿನ ಸರೋವರದ ನೆನಪಿರಲಿಲ್ಲ.

ಅಸೋಸಿಯೇಶನ್‌ನಲ್ಲಿ ಶ್ರೀ ಸ್ವರ್ಣಗೌರಿ ಮತ್ತು ಶ್ರೀ ವರಸಿದ್ಧಿ ವಿನಾಯಕ ಸ್ವಾಮಿ ಪೂಜಾ ಮಹೋತ್ಸವ

ಪ್ರತಿವರ್ಷದ ಭಾದ್ರಪದ ಮಾಸದಲ್ಲೂ ಬರುವ ಶುಕ್ಲಪಕ್ಷದ ತೃತೀಯದಂದು ಶ್ರೀ ಸ್ವರ್ಣಗೌರಿ ದೇವಿಯನ್ನೂ ಮತ್ತು ಚತುರ್ಥಿಯಂದು ಶ್ರೀ ವರಸಿದ್ಧಿ ವಿನಾಯಕ ಸ್ವಾಮಿಯನ್ನೂ ಅಸೋಸಿಯೇಶನ್ನಿಗೆ ಬರ ಮಾಡಿಕೊಂಡು ವಿಜೃಂಭಣೆಯಿಂದ ಪೂಜಾ ಕಾರ್ಯವನ್ನು ನೆರವೇರಿಸಿಕೊಂಡು ಬರುವ ಪದ್ಧತಿ ಕಳೆದ 57 ವರ್ಷಗಳಿಂದಲೂ ನಡೆದು ಬಂದಿದೆ.

ಅಂತೆಯೇ ಈ ವರ್ಷ ಕೂಡ, ಆಗಸ್ಟ್ 26 ರಂದು ಭಾದ್ರಪದ ಶುಕ್ಲ ತೃತೀಯ ದಂದು ಶ್ರೀ ಸ್ವರ್ಣಗೌರಿ ದೇವಿಯನ್ನು ಅಲಂಕರಿಸಿದ ಮಂಟಪ ದಲ್ಲಿಟ್ಟು ಶಾಸ್ತ್ರೋಕ್ತ ರೀತಿಯಲ್ಲಿ ಆಹ್ವಾನಿಸಿ, ಹೆಂಗಳೆಯರೆಲ್ಲ ಪೂಜೆಯನ್ನು ನೆರವೇರಿಸಿ ದರು. ಪೂಜಾ ವಿಧಿಗಳನ್ನು ಶ್ರೀ, ಗಣಪತಿ ಭಟ್ ಅವರು ನಿರ್ದೇಶಿಸಿ ಸಹಕರಿಸಿದರು.

ಆಗಸ್ಟ್ 27 ರಂದು ಯಂದು ಶ್ರೀ ವರಸಿದ್ಧಿ ವಿನಾಯಕ ಸ್ವಾಮಿಯನ್ನೂ ಅಸೋಸಿಯೇಶನ್ನಿಗೆ ಕರೆತಂದು ಸುಂದರವಾಗಿ ಅಲಂಕರಿಸಿದ ಮಂಟಪದಲ್ಲಿ ಕೂರಿಸಿ ಪ್ರತಿಷ್ಠಾಪಿಸಲಾಯಿತು. ನಮ್ಮ ಅಸೋಸಿಯೇಶನ್ನಿನ ಕಾರ್ಯದರ್ಶಿಗಳಾದ ಡಾ. ಗಣಪತಿ ಶಂಕರಲಿಂಗ ಮತ್ತು ಅವರ ಶ್ರೀಮತಿ ರೇಶ್ಮಾ ಶಂಕರಲಿಂಗ ಪೂಜಾ ಕಾರ್ಯವನ್ನು ನಡೆಸಿಕೊಟ್ಟರು.



ಈ ವರ್ಷ ಭಾದ್ರಪದ ಶುಕ್ಲ ಚತುರ್ಥಿಯು ಬುಧವಾರ ಬಂದದ್ದು, ಶ್ರೀ ಸ್ವರ್ಣಗೌರಿ ಮತ್ತು ಶ್ರೀ ವರಸಿದ್ಧಿ ವಿನಾಯಕ ಸ್ವಾಮಿಗೆ ನಮ್ಮಲ್ಲಿ 6 ದಿನ ಪೂಜಾ ಕೈಂಕರ್ಯ ನಡೆಯಿತು. ಶುಕ್ರವಾರದಂದು ಹೆಂಗಸರಿಗೆ ಅರಿಶಿಣ ಕುಂಕುಮ ನೀಡುವ ಕಾರ್ಯ ನಡೆಯಿತು. ಜೊತೆಗೆ ಬಳೆ, ಹಣ್ಣು ಮತ್ತು ತಾಂಬೂಲ ನೀಡಿ ಸತ್ಕರಿಸಲಾಯಿತು. ಅಂದು ನಮ್ಮ ಸದಸ್ಯೆಯಾದ ವಿದುಷಿ (ಶ್ರೀಮತಿ) ಶ್ಯಾಮಲಾ ರಾಧೇಶ್ ಹಾಗೂ ಅವರ ಮಗಳು ಮಹತಿ ದೇವರಿಗೆ ಸಂಗೀತ ಸೇವೆಯ ಅಂಗವಾಗಿ ದೇವರನಾಮಗಳು ಮತ್ತು ಭಜನೆಯ ಹಾಡುಗಳನ್ನು ಹಾಡಿದರು.



ಅಸೋಸಿಯೇಶನ್ ಪದ್ಧತಿಯಂತೆ ರವಿವಾರ 31ರಂದು, ವೇದ ಘೋಷಗಳೊಂದಿಗೆ ವಿಸರ್ಜನಾ ಪೂಜೆ ಮಾಡಿ, ಮೆರವಣಿಗೆಯಲ್ಲಿ ದಾದರ್ ಸಮುದ್ರತೀರಕ್ಕೆ ಕೊಂಡೊಯ್ದು ಬೀಳ್ಕೊಟ್ಟು ಬಂದೆವು.. ಕೊನೆಯ ದಿನದ ಪೂಜೆಯನ್ನು ಶ್ರೀಯುತ ಫಲ್ಗುಣ ಹಾಗೂ ಶ್ರೀಮತಿ ದೀಪ್ತಿಯವರು ನಡೆಸಿಕೊಟ್ಟರು

ನಮ್ಮ ಗಣಪತಿ ನಮಗೆ ನಮ್ಮ ಬಾಳಿನಲ್ಲಿ ಪ್ರತಿದಿನವೂ ಬಹಳ ತಿಳಿವನ್ನು ನೀಡುತ್ತಾನೆ. ಯಾವ ಅಡೆತಡೆಗಳು ಬಂದರೂ ಅವುಗಳನ್ನು ಹೇಗೆ ನಾವು ಬಗೆಹರಿಸಬೇಕೆಂದು ತಿಳಿಸುತ್ತಿರುತ್ತಾನೆ ಆದರೆ ನಾವುಗಳು ಅವನು ನೀಡುವ ತಿಳಿವನ್ನು ಕಣ್ತೆರೆದು ನೋಡುತ್ತಿರಬೇಕು ಗಣಪತಿ, ಎಂದರೆ, ಗಣಗಳ ಒಡೆಯ. ಎಲ್ಲ ಮಂದಿಗೆ ಒಳ್ಳೆಯದು ಮಾಡುವುದು ನಮ್ಮ ಎದೆಯಲ್ಲಿದ್ದರೆ ಮಾತ್ರ, ನಮ್ಮೆಲ್ಲರಿಗೂ ಅವನು ಒಳ್ಳೆಯದು ಮಾಡುತ್ತಾನೆ.

ಈಗ ನೋಡಿ, ನಮ್ಮ ನಾಡಿಗೆ ತೊಂದರೆ ಒದಗಿದೆ. ಬೇರೆಯವರರು ಹೊಡೆದಾಡುತ್ತ, ಅವರ ಜಗಳದಲ್ಲಿ ನಮ್ಮನ್ನು ಎಳೆದು, ನಮಗೆ ಹೆಚ್ಚಿನ ಸುಂಕ ಹಾಕಿದರೆ ಅದರಲ್ಲಿ ನಮ್ಮ ತಪ್ಪೇನಿದೆ? ಇಲ್ಲ. ಆದ್ದರಿಂದರಿಂದಲೇ ಈಗ ಗಣಪತಿ ನಮ್ಮೆಲ್ಲರ ಮನೆಗೂ ಬಂದು, "ನೋಡಿ, ಮಕ್ಕಳೇ, ಒಂದಾಗಿ ನಿಲ್ಲಿ, ನಾನು, ನನ್ನ ಸೊಂಡಿಲಿಂದ ಒಂದು ಬಾರಿ ಗಾಳಿ ಓದುತ್ತೇನೆ, ಅದರಿಂದ ಈ ಬಂದಿರುವ ತೊಂದರೆಗಳೆಲ್ಲ ಹಾರಿ ಹೋಗುತ್ತವೆ. ಆದರೆ ನೀವು ಬೇರೆಯವರಿಗೆ ಕೆಟ್ಟದ್ದು ಬಯಸಬಾರದು" ಎಂದು ಹೇಳಿದ್ದಾನೆ. ಗಣಪತಿ ಹೇಳಿದ್ದನ್ನು ನಾವು ಪಾಲಿಸೋಣ. ಯಾರು ಎಷ್ಟು ಸುಂಕ ಹಾಕಿದರೂ ನಮ್ಮಲ್ಲಿ ಇರುವ ಬಡವರನ್ನೆಲಾ ನೋಡಿಕೊಳ್ಳುವುದೇ ನಮ್ಮ ಕೆಲಸವವಾಗಿರಬೇಕು. ಯಾರು ಕೈ ಒಡ್ಡಿದರೂ ನಮ್ಮ ಕೈ ಮುಂದಾಗಿ ಅವರಿಗೆ ನೀಡಬೇಕು. ಯಾರು ಬೀದಿಯಲ್ಲಿ ಬಂದು ನಮ್ಮ ಮುಂದೆ ಕೈಚಾಚಿ ನಿಂತರೆ, ನಮ್ಮ ಜೇಬಿನಲ್ಲಿ ಕೈಹಾಕಿ ಎಷ್ಟು ನೀಡುವುದೋ ಅಷ್ಟು ನೀಡಿದರೆ ಗಣಪ ನಮ್ಮಗೂ ಒಳ್ಳೆಯದನ್ನು ಮಾಡುತ್ತಾನೆ.

ಬನ್ನಿ ಎಲ್ಲರೂ ಸೇರಿ ಗಣಪಗೆ ಮೊರೆ ಹೋಗೋಣ.

ಮುಂಬರುವ ಕಾರ್ಯಕ್ರಮಗಳು

ಬಿ. ವಿ. ಕಾರಂತರ ಸಂಸ್ಮರಣೆ
ಮೂರು ದಿನಗಳ ಕನ್ನಡ ನಾಟಕೋತ್ಸವ
ಬೆನಕ ತಂಡ, ಬೆಂಗಳೂರು ಇವರಿಂದ

31.10.2025 ಶುಕ್ರವಾರ ಸಂಜೆ 6.30 –

ಸತ್ತವರ ನೆರಳು

ನಾಟಕಕಾರರು : **ಜಿ. ಬಿ. ಜೋಶಿ**

ಸಂಗೀತ ಮತ್ತು ನಿರ್ದೇಶನ : **ಬಿ. ವಿ. ಕಾರಂತ**

01.11.2025 ಶನಿವಾರ – ಸಂಜೆ 6.30

ಹಯವದನ

ನಾಟಕಕಾರರು : **ಗಿರೀಶ್ ಕಾರ್ನಾಡ್**

ಸಂಗೀತ ಮತ್ತು ನಿರ್ದೇಶನ : **ಬಿ. ವಿ. ಕಾರಂತ**

02.11.2025 ಭಾನುವಾರ – ಸಂಜೆ 6.30 – **ಗೋಕುಲ ನಿರ್ಗಮನ**

ನಾಟಕಕಾರರು : **ಪು. ತಿ. ನರಸಿಂಹಚಾರ್ಯ**

ಸಂಗೀತ ಮತ್ತು ನಿರ್ದೇಶನ : **ಬಿ. ವಿ. ಕಾರಂತ**

ಸ್ಥಳ : ಮೈಸೂರು ಅಸೋಸಿಯೇಷನ್ ಸಭಾಗೃಹ,

393, ಭಾವು ದಾಜಿ ರಸ್ತೆ, ಮಾಟುಂಗ, ಮುಂಬೈ – 400 019.

Congratulations

Kshama Anagodumath is Honored with "India's Best Design Student 2025" Award.

Kshama is daughter of our member Smt. Girija.

We are proud to share that Kshama has been conferred with the prestigious 'India's Best Design Student 2025' award for her outstanding creativity. Her innovative ideas, unique style, and dedication have brought her well-deserved recognition at the national level. We wholeheartedly congratulate her on this remarkable success.

ಮುಂಬಯಿ ಸಮಾಚಾರ

ವಡಾಲಾದ ಪ್ರತಿಪಂಡರಾಪುರ ಎಂದೇ ಕರೆಯಲಾಗುವ ವಿಠ್ಠಲ ದೇವಸ್ಥಾನ ಸುಮಾರು 400 ವರ್ಷ ಹಳೆಯದು. ಒಂದು ಪ್ರತೀತಿಯ ಪ್ರಕಾರ, ಕೋಳಿ ಮತ್ತು ಅಗ್ರಿ ಸಮುದಾಯದ ಭಕ್ತರು ಪಂಡರಾಪುರದ ಯಾತ್ರೆ (ವಾರಿ) ಮಾಡುತ್ತಿದ್ದಾಗ, ಅವರ ಗುರುವಿನ ಕಾಲು ಚಂದ್ರಭಾಗಾ ನದಿಯಲ್ಲಿ ಸಿಕ್ಕು ಗಾಯವಾಯಿತು. ಅವರನ್ನು ಎತ್ತಲು ಇತರರು ಧಾವಿಸಿದಾಗ, ಅವರಿಗೆ ನದಿಯಲ್ಲಿ ಈ ಮೂರ್ತಿ ಸಿಕ್ಕಿತು. ಗುರುವಿನ ಸೂಚನೆಯಂತೆ ಅವರು ಅದನ್ನು ತಂದು ವಡಾಲಾದಲ್ಲಿ ಸಣ್ಣ ಗುಡಿ ಕಟ್ಟಿ ಪ್ರತಿಷ್ಠಾಪಿಸಿದರು. 1614ರಲ್ಲಿ ಸಾಕ್ಷಾತ್ ಸಂತ ತುಕಾರಾಮನೇ ಈ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ಮಾಡಿದ್ದ ಎಂದು ಒಂದು ಕಥೆ.

ಇಲ್ಲಿ ಆಷಾಢೀ ಏಕಾದಶಿಯಂದು ಭಕ್ತರು ಕಿಕ್ಕಿರಿಯುತ್ತಾರೆ.

ವಿಜಯ ದಶಮಿಯ ಪವಿತ್ರ ಹಬ್ಬದಂದು
ಸತ್ಯ, ಧರ್ಮ ಮತ್ತು ಶಾಂತಿ
ನಿಮ್ಮ ಜೀವನದಲ್ಲಿ ವಿಜಯಿಯಾಗಲಿ.
'ನೇಸರು' ಓದುಗರಿಗೆ
ದಸರಾ ಹಬ್ಬದ ಶುಭಾಶಯಗಳು.

(ಪುಟ 2 ರಿಂದ....)

ಚಿತ್ರಕಲಾ ಸ್ಪರ್ಧೆ

ಸ್ಥಳದಲ್ಲಿ ಚಿತ್ರ ಬರೆಯುವ ಮುಕ್ತ ಸ್ಪರ್ಧೆಯನ್ನು ಮಾತ್ರ ನಡೆಸಿ, ಬಾಕಿ ಎಲ್ಲವನ್ನು ನಮ್ಮ ರಿಪೇರಿ ಕೆಲಸ ಸಂಪೂರ್ಣ ಮುಗಿದ ಮೇಲೆ ಒಂದೊಂದಾಗಿ ಮಾಡುವುದಾಗಿ ನಿರ್ಣಯಿಸಿದೆವು.

ಆಗಸ್ಟ್ 10ರ ಬೆಳಿಗ್ಗೆ ಏಳರಿಂದ ಸ್ಪರ್ಧೆಗಾಗಿ ಸ್ಥಳದಲ್ಲೇ ಚಿತ್ರ ಬರೆಯುವ ಮುಕ್ತ ಸ್ಪರ್ಧೆಗಾಗಿ ಕಲಾವಿದರು ಆಗಮಿಸತೊಡಗಿದರು. ಬಂದವರಿಗೆಲ್ಲ ಬಿಸಿ ಬಿಸಿ ಕಾಫಿ ಮತ್ತು ಉಪ್ಪಿಟ್ಟಿನ ಏರ್ಪಾಟು ಮಾಡಲಾಗಿತ್ತು. ಬರೀ ಮುಂಬೈ ನಗರ ಅಷ್ಟೇ ಅಲ್ಲದೆ ಠಾಣೆ, ಡೊಂಬಿವಲಿ, ಪನವೇಲ್ ಇತ್ಯಾದಿ ಉಪನಗರಗಳಿಂದಲೂ ಹಾಗೂ ಪರ ಊರುಗಳಿಂದಲೂ ಕಲಾವಿದರು ಆಗಮಿಸಿದ್ದು ಒಟ್ಟು 47 ಕಲಾವಿದರು ಬಂದು ಹೆಸರು ಹಚ್ಚಿ, ಕಾಫಿ, ತಿಂಡಿ ಪೂರೈಸಿ ತಮ್ಮ ತಮ್ಮ ಚಿತ್ರ ಬರೆಯುವ ಕಾಗದವನ್ನು ತೆಗೆದುಕೊಂಡು, ಒಳ್ಳೆಯ ದೃಶ್ಯವನ್ನು ಹುಡುಕಿಕೊಂಡು ಹೊರಟುಹೋದರು.

ನಂತರ ಸುಮಾರು ಮಧ್ಯಾಹ್ನ 12 ಘಂಟೆಯಿಂದ ಒಬ್ಬೊಬ್ಬರಾಗಿ ವಾಪಸ್ ಬರಲು ತೊಡಗಿ ತಮ್ಮ ತಮ್ಮ ಕಲಾಕೃತಿಗಳನ್ನು ಸಲ್ಲಿಸಿದರು. ಅವರೆಲ್ಲರಿಗೂ ಊಟದ ಏರ್ಪಾಡು ಮಾಡಲಾಗಿತ್ತು

ಮಧ್ಯಾಹ್ನ 4:30 ಯಿಂದ ಗಿರಗಾಂವಿನ ಮುಂಬಯಿ ಕಲಾ ಮಹಾವಿದ್ಯಾಲದ ಪ್ರಿನ್ಸಿಪಾಲ ಶ್ರೀ ಮಹಾವೀರ ಪಾಟೀಲ್ ಇವರಿಂದ ಮೌಲ್ಯಮಾಪನೆ ನಮ್ಮವರೇ ಆದ ಕಲಾವಿದ ಶ್ರೀ ಜಯ ಸಾಲಿಯಾನ್ ಇವರ ಸಹಾಯದೊಂದಿಗೆ ನಡೆಯಿತು.

ಈ ಕೆಳಕಂಡವರು ವಿಜೇತರಾಗಿ ಬಹುಮಾನ ಪಡೆದರು.

ಮೈಸೂರು ಅಸೋಸಿಯೇಷನ್, ಮುಂಬಯಿ

The Mysore Association, Bombay

393, Bhau Daji Road, Matunga, Mumbai - 400 019. Tel: (022) 2403 7065

Website: www.mysoreassociation.in E-mail: mysoreassociation.mumbai@gmail.com

Mysore Association's Centenary Year (1926 - 2026)

LANDSCAPE PAINTING COMPETITION WINNERS - 2025

Sr. No.	Name	Prize
1	SHUBHAM KESARKAR	I
2	HARSAHALA BANGAR	II
3	VARUN SINGH	III
	SPECIAL PRIZES FOR FEMALE	
1	NISHA NARENDRA OLI	
2	SIA KASHYAP	
3	SWATI SHERIGARA	

ನಮ್ಮ ಎರಡನೇ ಬಹುಮಾನಕ್ಕೆ ಒಬ್ಬ ಪ್ರತಿಭಾವಂತ ಹೆಣ್ಣು ಮಗಳು ಆಯ್ಕೆಯಾದದ್ದು ವಿಶೇಷವಾಗಿತ್ತು.

ನಂತರ ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ಕಲಾವಿದರುಗಳಲ್ಲದೇ, ಅಂದು ಎನ್.ಕೆ.ಇ.ಎಸ್. ಸೊಸೈಟಿಯ ಕಮಿಟಿಯ ಸಭೆ ಸಹಾ ಅಸೋಸಿಯೇಷನ್‌ನಲ್ಲಿ ಇದ್ದಿದ್ದರಿಂದ ಆ ಸದಸ್ಯರುಗಳು ಕೂಡ

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಬಹುಮಾನಗಳನ್ನು ಅಧ್ಯಕ್ಷೆ ಕಮಲ, ಎನ್ ಕೆ ಇ ಎಸ್ ಅಧ್ಯಕ್ಷ ಪಾರ್ಥಸಾರಥಿ ನಾಯಕ್ ಮತ್ತು ನಮ್ಮ ಇತರ ಕಮಿಟಿ ಸದಸ್ಯರುಗಳು ಹಂಚಿದರು. ಒಟ್ಟಿನಲ್ಲಿ ಕಾರ್ಯಕ್ರಮವು ತುಂಬಾ ಚೆನ್ನಾಗಿ ನಡೆದು ಕಲಾವಿದರನ್ನು ಖುಷಿಯಿಂದ ಮನೆಗೆ ನಡೆದರು

ಈ ನಮ್ಮ ಕಾರ್ಯಕ್ರಮದಲ್ಲಿ ನಮಗೆ ಸಂಪೂರ್ಣ ಸಹಕಾರವನ್ನೂ, ಮಾರ್ಗದರ್ಶನವನ್ನೂ ನೀಡಿದ ಕಲಾವಿದ ಶ್ರೀ ಜಯ ಸಾಲಿಯಾನ್ ಇವರಿಗೆ ನಮ್ಮ ಅಸೋಸಿಯೇಷನ್ ಪರವಾಗಿ ತುಂಬು ಹೃದಯದ ಧನ್ಯವಾದಗಳು. ಇವರ ಸಹಾಯ, ಸಹಕಾರಗಳು ನಮ್ಮ ಅಸೋಸಿಯೇಷನ್ನಿಗೆ ಹೀಗೆಯೇ ಮುಂದುವರಿಯಲಿ ಎಂದು ಕೋರುತ್ತೇವೆ.

ಇನ್ನು ಉಳಿದ ವಿಭಾಗಗಳಿಗಾಗಿ ಚಿತ್ರಕಲಾ ಸ್ಪರ್ಧೆಯನ್ನು ನಮ್ಮ ರಿಪೇರಿ ಕೆಲಸ ಮುಗಿದ, ಮೇಲೆ ಅಕ್ಟೋಬರ್ ಅಥವಾ ನವಂಬರ್ ತಿಂಗಳಿನಲ್ಲಿ ನಡೆಸುವುದಾಗಿ ಯೋಜಿಸಲಾಗಿದೆ.

ವಿದ್ವಾನ್ ಸರೋಜಾ ಶ್ರೀನಾಥ್ ಅವರಿಗೆ ನುಡಿ ನಮನ ಕಾರ್ಯಕ್ರಮ

ಇತ್ತೀಚಿಗೆ ನಿಧನರಾದ ಹಿರಿಯ ಕಲಾ ಚೇತನ ಸಂಗೀತ ವಿದ್ವಾನ್ ಸರೋಜಾ ಶ್ರೀನಾಥ್ ಅವರಿಗೆ ನುಡಿ ನಮನ ಸಲ್ಲಿಸುವ ಕಾರ್ಯಕ್ರಮವನ್ನು ಆಗಸ್ಟ್ 22ರಂದು ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಭಾಗದ ಮುಖ್ಯಸ್ಥ ಪ್ರೊ. ಜಿ. ಎನ್. ಉಪಾಧ್ಯ ಅವರು ವಹಿಸಿ ಮಾತನಾಡುತ್ತಾ ಶ್ರೀಮತಿ ಸರೋಜಾ ಶ್ರೀನಾಥ್ ಅವರು ಮುಂಬಯಿ ವಿಶ್ವವಿದ್ಯಾಲಯದ ನಲಂದಾ ನೃತ್ಯ ಕಲಾ ಮಹಾವಿದ್ಯಾಲಯದಲ್ಲಿ ಸಂಗೀತ ಶಾಸ್ತ್ರಜ್ಞೆಯಾಗಿ, ಭರತನಾಟ್ಯ ವಿಭಾಗದ ಮುಖ್ಯಸ್ಥೆಯಾಗಿ ಇಪ್ಪತ್ತೆಂಟು ವರ್ಷಗಳ ಕಾಲ ಸೇವೆ ಸಲ್ಲಿಸಿ ಸೈ ಎನಿಸಿಕೊಂಡರು. ಬಾಲ್ಯದಿಂದಲೂ ವಿಶೇಷ ಆಸಕ್ತಿ ತಳೆದಿದ್ದ ನೃತ್ಯ ಹಾಗೂ ಸಂಗೀತ ಕ್ಷೇತ್ರದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಅವರಿಗೆ ಅಲ್ಲಿ ಒಳ್ಳೆಯ ವೇದಿಕೆ ದೊರಕಿತು. ಸರೋಜಾ ಅವರದ್ದು ಸೃಷ್ಟಿಶೀಲ ಮನಸ್ಸು. ವಿಶ್ವವಿದ್ಯಾಲಯದ ನೃತ್ಯಕಲಾ ತರಗತಿಗಳಲ್ಲಿ ಪಾಠ ಪ್ರವಚನಗಳ ಜತೆಜತೆಗೆ ಸಂಗೀತ ರಚನೆ, ಸಂಯೋಜನೆ ಮಾಡಲು ಸಿಕ್ಕ ಅವಕಾಶವನ್ನು ಸರೋಜಾ ಅವರು ತಮ್ಮೊಳಗಿನ ಪ್ರತಿಭೆ ಹೊರಹೊಮ್ಮಲು ಬಳಸಿಕೊಂಡರು. ಪ್ರತಿ ವರ್ಷ ನಲಂದಾ ಮಹಾ ವಿದ್ಯಾಲಯದಲ್ಲಿ ನಡೆಯುತಿದ್ದ ಸಂಗೀತ,ನೃತ್ಯ, ನಾಟಕ ಸ್ಪರ್ಧೆಗಳಿಗಾಗಿ ಒಂದು ಅಥವಾ ಎರಡು ನೃತ್ಯ ನಾಟಕಗಳನ್ನು ಸಾಹಿತ್ಯ, ಸಂಗೀತ ರಚನೆಯೊಂದಿಗೆ ಸ್ವತಃ ರಚನೆ ಮಾಡಿ ಕೊಡುತ್ತಿದ್ದರು. ಡಾ. ಕನಕರಿಲೇ ಅವರ ಉತ್ತಮ ಮಾರ್ಗದರ್ಶನದಲ್ಲಿ ಸರೋಜಾ ಅವರು ಪದವಿ ತರಗತಿಗಳ ಪಠ್ಯಕ್ರಮಗಳಿಗೆ ಹಾಗೂ ಕೊರಿಯೋಗ್ರಫಿ ವಿಷಯದ ಪರೀಕ್ಷೆಗಳಿಗಾಗಿ ಹೊಸ ಹೊಸ ಕೀರ್ತನೆಗಳು, ಕೃತಿ, ಜಾವಳಿ, ಪದ ತಿಲ್ಲಾನ, ಶ್ಲೋಕಗಳನ್ನು ರಚಿಸಿದರು. ಸರೋಜಾ ಅವರು ಪ್ರಯೋಗ ನಿರತರಾಗಿದ್ದವರು. ಅವರ ನಿಧನದಿಂದ ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಅಪಾರವಾದ ನಷ್ಟವಾಗಿದೆ.

ನೃತ್ಯ,ಸಂಗೀತ ಜ್ಞಾನ ಮತ್ತು ಸಾಹಿತ್ಯಾಭಿರುಚಿ ಇವು ಮೂರೂ ಸರೋಜಾ ಶ್ರೀನಾಥ್ ಅವರಲ್ಲಿ ಮುಪ್ಪುರಿಗೊಂಡಿದ್ದವು. ಅವರು ಸಂಗೀತ ರಚನೆಗಳ ಜೊತೆಗೆ ರಾಗ ಹಾಗೂ ನೃತ್ಯ ಸಂಯೋಜನೆಗಳನ್ನು ಸುಲಲಿತವಾಗಿ ಮಾಡುತ್ತಿದ್ದರು. ಭರತನಾಟ್ಯ ವಿಭಾಗದ ಜೊತೆಗೆ ಇನ್ನಿತರ ಸಂಘ ಸಂಸ್ಥೆಗಳಿಗೆ, ಸಾರ್ವಜನಿಕ ಸಂದರ್ಭಗಳಿಗೆ ರಚಿಸಿದ ಅವರ ಅನೇಕ ರಚನೆಗಳು ಇಂದಿಗೂ ವ್ಯಾಪಕವಾಗಿ ಭರತನಾಟ್ಯ ಕಾರ್ಯಕ್ರಮಗಳಲ್ಲಿ ಪ್ರದರ್ಶನಗೊಳ್ಳುತ್ತಿರುವುದು ಅವರ ಪ್ರತಿಭೆಗೆ ಹಿಡಿದ ಕನ್ನಡಿ.

ತಾವು ಕಲಿತ ಸಂಗೀತ, ನೃತ್ಯ ಕಲಾ ಪರಂಪರೆಯನ್ನು ಮುಂದಿನ ತಲೆಮಾರಿಗೆ ದಾಟಿಸುವ ನಿಟ್ಟಿನಲ್ಲಿ ಅವರು ಕಟಿಬದ್ಧರಾಗಿ ಕೆಲಸ ಮಾಡಿದರು. 'ಕನಕಸಭಾ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್' ಎಂಬ ನೃತ್ಯ ಶಾಲೆಯನ್ನು ಮುಂಬೈಯಲ್ಲಿ ಆರಂಭಿಸಿ ಸಾವಿರಾರು ಆಸಕ್ತರಿಗೆ ನೃತ್ಯ, ಸಂಗೀತದ ಸವಿಯನ್ನು ಅವರು ಉಣಬಡಿಸಿದ್ದಾರೆ. ಈ ಸಂಸ್ಥೆಗೆ ಈಗ 45ರ ಪ್ರಾಯ. ಸರೋಜಾ ಅವರ ಮಗಳು ಡಾ. ಸಿರಿ ನೃತ್ಯ ಕಲಾವಿದರಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಾಮಾಂಕಿತರಾಗಿದ್ದಾರೆ. ಮೊಮ್ಮಗಳು ಅಮರ ಸಹ ಕಲಾಮಾತೆಯ ಆರಾಧನೆಯಲ್ಲಿ ನಿರತರಾಗಿದ್ದಾರೆ. ಅವರ ಅಳಿಯ ಸಿಂಗಾಪುರದ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಇಡೀ ಕುಟುಂಬವೇ ಕಲೆಯ ಉಪಾಸನೆಯಲ್ಲಿ ನಿರತವಾಗಿದೆ.

ಸರೋಜಾ ಶ್ರೀನಾಥ್ ಅವರದು ಬಹುಭಾಷಿಕ ಸಂವೇದನೆ. ಸಂಸ್ಕೃತ, ಇಂಗ್ಲಿಷ್, ಮರಾಠಿ, ಹಿಂದಿ, ಕನ್ನಡ, ತಮಿಳು, ತೆಲುಗು ಹಾಗೂ ಕೆಲವು ವಿದೇಶಿ ಭಾಷೆಗಳಲ್ಲಿ ಅವರಿಗೆ ಒಳ್ಳೆಯ ಹಿಡಿತವಿತ್ತು. ಕನ್ನಡ ನಾಡು ನುಡಿ, ಸಾಹಿತ್ಯ, ಸಂಸ್ಕೃತಿಗಳ ಬಗೆಗೆ ಅವರಿಗೆ ವಿಶೇಷವಾದ ಅಭಿಮಾನವಿತ್ತು. ಅಮರ ರಾಮಾಯಣ, ಮೈಸೂರಿನಿಂದ ಮೌನ್ಟ್ ಟಾಂಬೋರವರೆಗೆ, ಜಗದಗಲ ಕುತೂಹಲ, ಸಂಗೀತ ಸಾಹಿತ್ಯ ಅನುಸಂಧಾನ, ಕರ್ನಾಟಕದ ದೇವಾಲಯಗಳು, ಕನ್ನಡ ನಾಡಿನ ಸಂಗೀತ ಸೌಭಾಗ್ಯ, ತಾತಿ ಹೇಳಿದ ಕತೆಗಳು, ಭಾಗ್ಯಶ್ರೀ, ಪಾರ್ವತಿ ಕಲ್ಯಾಣ, ಸಂಗೀತ ವಾದ್ಯಗಳು ಮೊದಲಾದವು ಸರೋಜಾ ಶ್ರೀನಾಥ್ ಅವರ ಪ್ರಕಟಿತ ಮಹತ್ವದ ಕನ್ನಡ ಕೃತಿಗಳು. ಸಂಗೀತ,

ನೃತ್ಯ ಶಾಸ್ತ್ರಗಳಿಗೆ ಸಂಬಂಧಿಸಿದ ಅವರ ಅನೇಕ ರಚನೆಗಳು ಬಹು ಜನಪ್ರಿಯವಾಗಿವೆ. ಅವರ ನಿಧನದಿಂದ ದೊಡ್ಡ ಶೂನ್ಯವೊಂದು ಆವರಿಸಿದೆ ಎಂದು ಸರೋಜಾ ಅವರ ಬಹುಮುಖ ಸಾಧನೆಯನ್ನು ಪ್ರೊ. ಉಪಾಧ್ಯ ಅವರು ಸ್ಮರಿಸಿಕೊಂಡರು.

ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ಮಾತನಾಡುತ್ತಾ ಸರೋಜಾ ಶ್ರೀನಾಥ್ ಅವರು ಮಾದರಿ ಮಹಿಳೆ. ನಿರಂತರವಾಗಿ ಓದು, ಅಧ್ಯಯನ, ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ತನ್ನ ತೊಂಭತ್ತರ ಹರೆಯದಲ್ಲಿ ಆತ್ಮಕಥನವನ್ನು ಬರೆದು ಬೆಳಕಿಗೆ ತಂದದ್ದು ಸಾಮಾನ್ಯದ ಮಾತಲ್ಲ. ಹಿರಿಕಿರಿಯರೆಂಬ ಭೇದವಿಲ್ಲದೆ ಎಲ್ಲರೊಂದಿಗೆ ಪ್ರೀತಿಯಿಂದ ಬೆರೆತು ಬಾಳಿದವರು. ಸಂಗೀತ, ಸಾಹಿತ್ಯ ಕ್ಷೇತ್ರಕ್ಕೆ ಅವರ ಕೊಟ್ಟ ಕೊಡುಗೆ ಅಪಾರವಾದುದು ಎಂದು ಸರೋಜಾ ಶ್ರೀನಾಥ್ ಅವರ ಜೊತೆಗಿನ ನೆನಪುಗಳನ್ನು ಹಂಚಿಕೊಂಡರು.

ಸಂಶೋಧನ ವಿದ್ಯಾರ್ಥಿ ಕಲಾ ಭಾಗ್ವತ್ ಅವರು ಮಾತನಾಡಿ, ಸಾಮಾನ್ಯವಾಗಿ ಮನುಷ್ಯನ ವಯಸ್ಸು ವೃದ್ಧಿಯಾದಂತೆ ಜೀವನೋತ್ಸಾಹವು ಕುಗ್ಗುತ್ತದೆ. ಆದರೆ ಸರೋಜಮ್ಮನವರಲ್ಲಿ ಅದು ಹಿಗ್ಗಿ ಹೊಮ್ಮುತ್ತಿತ್ತು . ತೊಂಬತ್ತರ ಆಯುವಿನಲ್ಲೂ ಕೃತಿ ರಚನೆ, ಹೊಸ ಲಿಪಿಯ ಶೋಧ, ಸಂಗೀತ ನೃತ್ಯದ ಉಪಾಸನೆ ಮುಂದುವರಿದಿತ್ತು. ಅವರೀಗ ನಮ್ಮೊಂದಿಗೆ ಭೌತಿಕವಾಗಿ ಇಲ್ಲದಿರ ಬಹುದು. ಆದರೆ ಅವರ ಕ್ರಿಯಾಶೀಲತೆ, ಸೃಜನ ಶೀಲ ಮನೋಭಾವ, ಕನ್ನಡ ಪ್ರೀತಿ ಮತ್ತು ಎಲ್ಲ ರೊಡನೆ ಇರಬೇಕಾದ ತಾಯ್ತನದ ಮಮತೆ ನಮಗೆ ಸದಾ ಆದರ್ಶ ವಾಗಿರುವುದು. ಮಾತೆತ್ತಿದರೆ ಕನ್ನಡ ವಿಭಾಗದ ಕುರಿತು ಮೆಚ್ಚುಗೆ, ವಿಶ್ವಾಸವನ್ನು ವ್ಯಕ್ತಪಡಿಸುತ್ತಿದ್ದ ಅವರನ್ನು ವಿಭಾಗದ ವಿದ್ಯಾರ್ಥಿಗಳಾದ ನಾವು ಸದಾ ಸ್ಮರಿಸಬೇಕು. ಅವರ ಕನ್ನಡ ನಾಡಿನ ಸಂಗೀತ ಸೌಭಾಗ್ಯ ಕೃತಿಗೆ ಮುನ್ನುಡಿಯನ್ನು ಬರೆಯಲು ಮತ್ತು ಅವರೊಂದಿಗೆ ಅಲ್ಪ ಸಮಯದ ಭೇಟಿ, ಮಾತುಕತೆಗೆ ಅವಕಾಶವಾಗಿದ್ದು ನನ್ನ ಭಾಗ್ಯ ಎಂದು ಸ್ಮರಿಸಿದರು.

ವಿಭಾಗದ ಸಂಶೋಧನ ವಿದ್ಯಾರ್ಥಿ ಸವಿತಾ ಅರುಣ್ ಶೆಟ್ಟಿ ಅವರು ಸರೋಜಾ ಶ್ರೀನಾಥ್ ಅವರ ಸಾಧನೆಯನ್ನು ತೆರೆದಿಟ್ಟು, ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

ಸಂಶೋಧನ ವಿದ್ಯಾರ್ಥಿಗಳಾದ ಸುರೇಖಾ ದೇವಾಡಿಗ, ಅನಿತಾ ಪೂಜಾರಿ ತಾಕೋಡೆ, ಸುರೇಖಾ ಹರಿಪ್ರಸಾದ್ ಶೆಟ್ಟಿ, ಪ್ರತಿಭಾ ರಾವ್, ಎಂ. ಎ. ವಿದ್ಯಾರ್ಥಿ ಭಾಗ್ಯ ಜ್ಯೋತಿ, ಡಿಪ್ಲೊಮಾ ವಿದ್ಯಾರ್ಥಿಗಳಾದ ಉಷಾ ಶೆಟ್ಟಿ, ಪುಷ್ಪಲತಾ ಗೌಡ, ಯೋಗಿನಿ ಆತ್ರೇಯ, ಶಾರದಾ ವಲಾಡ್ ಹಾಜರಿದ್ದರು.

ವರದಿ : ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ

ಹೊರನಾಡಿನಲ್ಲಿ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆಗಳು

✍ ರತ್ನಾವತಿ ಗಣೇಶ್ ಸಾಲಿಯಾನ್

ಕನ್ನಡವೆಂಬುದು ಕೇವಲ ಒಂದು ಭಾಷೆಯಲ್ಲ, ಅದು ಭಾವನೆಗಳ ಹೊಳೆ, ಅದರ ಮೃದು ಸ್ವರಗಳು ಮನ ತಣಿಸುತ್ತವೆ. ಜ್ಞಾನದ ಅರ್ಥಳಿಗೆ ಜೀವ ತುಂಬುತ್ತವೆ. ಕನ್ನಡಿಗರ ಹೃದಯಗಳು ಸ್ಫಟಿಕದ ಮಣೀಯಂತೆ ಶುದ್ಧವೂ ಹಾಗೂ ವಿಶಾಲವೂ ಆಗಿವೆ. ಕನ್ನಡ ಮಾತನಾಡುವವರು ಅವರ ಮಾತಿನ ಮಾಧುರ್ಯದಿಂದ ವಿಶ್ವವನ್ನೇ ಗೆಲ್ಲುತ್ತಾರೆ! ಈ ಜಗತ್ತಿನಲ್ಲಿ ಕನ್ನಡ ಭಾಷೆಯ ಸೌಂದರ್ಯಕ್ಕೆ ಸಮನಿಲ್ಲ.

ಕನ್ನಡಿಗರು ಉದ್ಯೋಗ ಮತ್ತು ಉತ್ತಮ ಅವಕಾಶಗಳಿಗಾಗಿ ಕರ್ನಾಟಕದಿಂದ ವಲಸೆ ಹೋದರೂ, ಅವರು ತಮ್ಮ ಮಾತೃಭಾಷೆಯನ್ನು ಮರೆತಿದ್ದಾರೆ ಎಂಬುದಕ್ಕೆ ಅರ್ಥವಿಲ್ಲ. ಕನ್ನಡಿಗರು ತಮ್ಮ ಮೌಲ್ಯಗಳು ಮತ್ತು ಸಂಸ್ಕೃತಿಯನ್ನು ಹರಡಲು ಹಾಗೂ ತಮ್ಮ ಮುಂದಿನ ಪೀಳಿಗೆಯಲ್ಲಿ ಸಾಂಸ್ಕೃತಿಕ ಮೌಲ್ಯಗಳು ಮತ್ತು ದೃಷ್ಟಿ ಕೋನಗಳನ್ನು ಬೆಳೆಸುವದರಲ್ಲಿ ಸಹಾಯ ನೀಡಿತು. ಸಾಂಸ್ಕೃತಿಕ ಪಠ್ಯಕ್ರಮದಲ್ಲಿ ಒಳಗೊಂಡು ಈ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಬಹುಭಾಷಾ ಮತ್ತು ಬಹು ಸಾಂಸ್ಕೃತಿಕ ಜಗತ್ತಿನಲ್ಲಿ ನಡೆಯಲು ಅಗತ್ಯವಿರುವ ಸಾಧನಗಳು ಮತ್ತು ತಿಳುವಳಿಕೆಗಳನ್ನು ಒದಗಿಸಿತ್ತು.

ಕಾಲಕಳೆದಂತೆ ವಿದೇಶಿ ಸಂಸ್ಕೃತಿ ಮತ್ತು ಭಾಷೆಯ ಪ್ರಭಾವ ನಮ್ಮ ಪರಂಪರೆಯ ಮೇಳೆ ಪ್ರಭಾವ ಬಿರಿತು. ಪೋಷಕರು ತಮ್ಮ ಮಕ್ಕಳನ್ನು ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ನೀಡಿದರೆ, ಅವರಿಗೆ ಉತ್ತಮ ಅವಕಾಶಗಳು ದೊರೆಯುವವು ಎಂದು ಭಾವನೆ ಹೊಂದಲು ಆರಂಭಿಸಿದರು. ಇದರಿಂದಾಗಿ ಭಾರತದ ಎಲ್ಲ ಪ್ರಾದೇಶಿಕ ಭಾಷೆಗಳು ತಮ್ಮ ಅಸ್ತಿತ್ವವನ್ನು ಉಳಿಸುವುದೇಗೆ ? ಎಂಬುದೇ ದೊಡ್ಡ ಪ್ರಶ್ನಾರ್ಥಕ ಚಿಹ್ನೆಯಾಗಿದೆ.

ಇದಕ್ಕೆ ಕನ್ನಡ ಭಾಷೆಯೇನು ಅಪವಾದವಲ್ಲ ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಕರ್ನಾಟಕದಿಂದ ಹೊರಗೆ ಇದ್ದರೂ, ತಮ್ಮ ಭಾಷೆ, ಸಂಸ್ಕೃತಿ ಮತ್ತು ಶಿಕ್ಷಣದ ಸಂಬಂಧ ತಾವು ಎದುರಿಸುವ ಸಮಸ್ಯೆಗಳನ್ನು ನಿರ್ಧರಿಸಲು ಪ್ರಯತ್ನಿಸುತ್ತಿರುವುದೇ ಗಮನಾರ್ಹವಾಗಿದೆ.

ಹೊರನಾಡಿನಲ್ಲಿರುವ ವಿದ್ಯಾರ್ಥಿಗಳ ಸಮಸ್ಯೆಗಳು:

ಕರ್ನಾಟಕದ ಹೊರಗಿರುವ ಕನ್ನಡ ವಿದ್ಯಾರ್ಥಿಗಳು ಭಾಷೆ, ಸಂಸ್ಕೃತಿ ಮತ್ತು ಶಿಕ್ಷಣ ಸಂಬಂಧಿಸಿದ ಅನೇಕ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳು ಮುಖ್ಯವಾಗಿ ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಬೆಂಬಲವಿಲ್ಲದೆ ಇರುವ ಪರಿಸ್ಥಿತಿಯಿಂದ ಉಂಟಾಗಿದೆ.

ಕನ್ನಡ ಭಾಷೆಗೆ ಅಲ್ಲಿ ಸೂಕ್ತ ಸ್ಥಾನಮಾನವಿಲ್ಲ:

ವಿದ್ಯಾರ್ಥಿಗಳು ಸುತ್ತಮುತ್ತಲಿನವರೊಂದಿಗೆ ಸಂಪರ್ಕ ಸಾಧಿಸಲು ಸ್ಥಳೀಯ ಅಥವಾ ಜಾಗತಿಕ ಭಾಷೆಗಳಲ್ಲಿ ಆಳವಾದ ಜ್ಞಾನ ಹೊಂದಬೇಕಾಗುತ್ತದೆ. ಇದು ಕನ್ನಡ ಭಾಷೆಯ ಬಳಕೆಯನ್ನು ಇಳಿಸುತ್ತದೆ. ಕರ್ನಾಟಕದ ಹೊರಗಿನ ಶಾಲೆಗಳಲ್ಲಿ ಕನ್ನಡವನ್ನು ನಿರ್ದಿಷ್ಟವಾಗಿ ಕಲಿಸಬೇಕಾದ ಕಡ್ಡಾಯವಿಲ್ಲ. ಈ ಕಾರಣದಿಂದಾಗಿ ಕನ್ನಡ ಭಾಷೆಯನ್ನು ಸೃಜನಶೀಲವಾಗಿ ಅಭ್ಯಾಸ ಮಾಡಲಾಗುವುದಿಲ್ಲ.

ಭಾಷಾ ಅವಘಡ: ಕನ್ನಡದ ಬಳಕೆಯ ಕೊರತೆ, ಕರ್ನಾಟಕದ ಹೊರಗಿನ ಪ್ರದೇಶಗಳಲ್ಲಿ ಕನ್ನಡವನ್ನು ಹೆಚ್ಚು ಮಾತನಾಡಲಾಗುವುದಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ತಮ್ಮ ಸ್ವಂತ ಭಾಷೆಯಲ್ಲಿ ಪ್ರತಿದಿನದ ಸಂವಹನ ಮಾಡಲು ಕಷ್ಟವಾಗುತ್ತದೆ.

ಸಂವಹನದಲ್ಲಿ ಕಷ್ಟ: ವಿದ್ಯಾರ್ಥಿಗಳು ತಮ್ಮ ಸುತ್ತಲೂ ಬೇರೆ ಭಾಷೆಗಳನ್ನು ಮಾತನಾಡುವವರೊಂದಿಗೆ ಕನ್ನಡದಲ್ಲಿ ಸಂವಹನ ಮಾಡಲು ತೊಂದರೆಯನ್ನು ಅನುಭವಿಸುತ್ತಾರೆ. ಇದು ಭಾಷೆಯ ಬಳಕೆಗೆ ಹಾನಿ ಮಾಡುವುದು.

ಭಾಷೆಯ ನಶಿಸುವಿಕೆ: ಕನ್ನಡ ಭಾಷೆಯನ್ನು ಪ್ರಾಯೋಗಿಕವಾಗಿ ಬಳಕೆ ಮಾಡಲು ಸೂಕ್ತ ಅವಕಾಶಗಳು ಕಡಿಮೆ ಇರುವುದರಿಂದ ವಿದ್ಯಾರ್ಥಿಗಳು ತಮ್ಮ ಭಾಷೆಯಲ್ಲಿ ಕೌಶಲ್ಯವನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ.

ಶಾಲೆಗಳಲ್ಲಿ ಕನ್ನಡ ಕೊರತೆ: ಕನ್ನಡವನ್ನೇ ಪಾಠವನ್ನಾಗಿ ಕಲಿಯದಿರುವುದು. ಕರ್ನಾಟಕದ ಹೊರಗಿನ ಅನೇಕ ಶಾಲೆಗಳಲಿ ಕನ್ನಡವನ್ನು

ಅಧ್ಯಯನ ವಿಷಯವಾಗಿ ನೀಡಲಾಗುತ್ತಿಲ್ಲ, ಇದರಿಂದ ವಿದ್ಯಾರ್ಥಿಗಳು ಸರಿಯಾದ ರೀತಿಯಲ್ಲಿ ತಮ್ಮ ಭಾಷೆಯನ್ನು ಕಲಿಯಲು ಸಾಧ್ಯವಿಲ್ಲ.

ಪಠ್ಯಕ್ರಮದ ನಿರ್ಬಂಧನೆಗಳು: ಕನ್ನಡವು ಬೇರೆ ಪ್ರಾಂತಗಳಲ್ಲಿ ಶಾಲಾ ಪಠ್ಯಕ್ರಮದಲ್ಲಿದ್ದು ಇಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಅದರ ಬಗ್ಗೆ ಪಠ್ಯಪುಸ್ತಕಗಳು ಅಥವಾ ಉಪಕರಣಗಳು ಲಭ್ಯವಿಲ್ಲ.

ಸಂಸ್ಕೃತಿಯ ಜ್ಞಾನ ಮತ್ತು ಸಂಪರ್ಕ ಕೊರತೆ:

ಸಾಂಸ್ಕೃತಿಕ ಆಚರಣೆಗಾಗಿ ಅವಕಾಶಗಳ ಕೊರತೆ. ಕನ್ನಡದ ಹಬ್ಬಗಳು ಮತ್ತು ಪರಂಪರೆಗಳನ್ನು ಆಚರಿಸಲು ವಿದ್ಯಾರ್ಥಿಗಳಿಗೆ ಹೊರಗಿನ ಪ್ರದೇಶಗಳಲ್ಲಿ ಅವಕಾಶಗಳು ಕಡಿಮೆಯಾಗುತ್ತವೆ. ಇದರಿಂದ ಅವುಗಳ ಸಂಸ್ಕೃತಿಯ ಪ್ರತೀಕಗಳನ್ನು ಬಲಪಡಿಸಲು ಕಷ್ಟವಾಗುತ್ತದೆ. ಪರಂಪರೆಯನ್ನು ಉಳಿಸಿಕೊಳ್ಳಲು ಕಷ್ಟ. ಕನ್ನಡ ಸಂಸ್ಕೃತಿಯನ್ನು ಉಳಿಸುವ ಹಾಗೂ ಬೋಧಿಸುವ ಅವಕಾಶಗಳು ಕಡಿಮೆ. ಇದರಿಂದ ಆಧುನಿಕ ಸಂಕೋಚವನ್ನು ಎದುರಿಸಲು ಕಷ್ಟವಾಗುತ್ತವೆ.

ಸಾಮಾಜಿಕ ಒತ್ತಡ ಮತ್ತು ಹಕ್ಕುಗಳ ಪ್ರಶ್ನೆಗಳು:

ಭಾಷೆಯ ಪ್ರತ್ಯೇಕತೆ: ಕನ್ನಡವನ್ನು ಮಾತನಾಡುವವರು ಕಡಿಮೆ ಇರುವ ಸ್ಥಳಗಳಲ್ಲಿ ವಿದ್ಯಾರ್ಥಿಗಳು ಭಾಷಾ ಕೊರತೆ ಹಾಗೂ ಬೇರೆ ಭಾಷೆಗಳಲ್ಲಿ ಮಾತನಾಡುವವರಿಂದ ತಮ್ಮನ್ನು ಹೊರದಬ್ಬಲು ಅನುಸರಿಸಬಹುದು.

ತಾಯ್ನುಡಿ ಉಳಿಸಲು ಸಂಘರ್ಷ : ಕನ್ನಡವನ್ನು ಉಳಿಸಲು ಹಾಗೂ ಬಲಪಡಿಸಲು ಪ್ರಯತ್ನಿಸುವ ಸಂದರ್ಭದಲ್ಲಿ ಹಲವಾರು ವಿದ್ಯಾರ್ಥಿಗಳಿಗೆ ತಮ್ಮ ತಾಯ್ನುಡಿ ಹಾಗೂ ಖ್ಯಾತಿ ಜತೆಗಿನ ಸಂಘರ್ಷ ಮಾಡಬೇಕಾಗುತ್ತದೆ.

ಕನ್ನಡ ಶಿಕ್ಷಕರ ಕೊರತೆ: ಕನ್ನಡ ಶಿಕ್ಷಕರ ಅಲಭ್ಯತೇ: ಕನ್ನಡವನ್ನು ಬೋಧಿಸಲು ಅನುಭವವುಳ್ಳ ಗುರುಗಳು ಹೊರಹೊಮ್ಮಲು, ಅವಕಾಶ ಇಲ್ಲದ ಕಾರಣ ಕನ್ನಡ ಪಾಠಗಳನ್ನು ಕಲಿಸಲು ಅನುಕೂಲಕರ ಪರಿಸ್ಥಿತಿ ಇಲ್ಲ.

ಅನರ್ಹ ಸಂಪನ್ಮೂಲಗಳು: ಶಿಕ್ಷಣ ಕೇಂದ್ರಗಳು ಕನ್ನಡಕ್ಕೆ ಅಗತ್ಯವಿರುವ ಉಪಕರಣಗಳು, ಪುಸ್ತಕಗಳು ಇಲ್ಲದಿರುವುದರಿಂದ ಕಲಿಕೆಗೆ ಸಮಸ್ಯೆ ಉಂಟಾಗುತ್ತದೆ.

ಕನ್ನಡ ಸಮುದಾಯದ ಕೊರತೆ:

ಸಂಪ್ರದಾಯ ತೊಡಕುಗಳು: ಕನ್ನಡ ಮಾತನಾಡುವ ಸಮುದಾಯಗಳು ಕಡಿಮೆ, ಇದರಿಂದ ವಿದ್ಯಾರ್ಥಿಗಳು ತಮ್ಮ ಭಾಷೆ ಮತ್ತು ಸಂಸ್ಕೃತಿ ಬಗ್ಗೆ ಹೆಚ್ಚು ಸಂಪರ್ಕದ ಅವಶ್ಯಕತೆ ಹೊಂದಿದರೂ ಅದನ್ನು ಪಡೆಯಲು ಸಾಧ್ಯವಗುತ್ತಿಲ್ಲ.

ಸಾಂಸ್ಕೃತಿಕ ಸಂಘಟನೆಗಳ ಕೊರತೆ: ಕನ್ನಡ ಭಾಷೆಯನ್ನು ಬಲಪಡಿಸುವುದಕ್ಕೆ ಇತರ ಪ್ರದೇಶಗಳಲ್ಲಿ ಸಾಂಸ್ಕೃತಿಕ ಸಂಘಟನೆಗಳು ಮತ್ತು ಕಾರ್ಯಕ್ರಮಗಳು ಕಡಿಮೆ ಇರುವುದರಿಂದ ವಿದ್ಯಾರ್ಥಿಗಳಿಗೆ ಸಂಸ್ಕೃತಿಯನ್ನು ಕಾಪಾಡಲು ತೊಂದರೆಯಾದಂತಾಗುತ್ತದೆ.

ಕರ್ನಾಟಕದ ಹೊರಗಿರುವ ಕನ್ನಡ ಶಿಕ್ಷಕರು ಎದುರಿಸುವ ಸಮಸ್ಯೆಗಳು:

ಕರ್ನಾಟಕದ ಹೊರಗಿರುವ ಕನ್ನಡ ಶಿಕ್ಷಕರು ಅನೇಕ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಈ ಸವಾಲುಗಳನ್ನು ಮುಖ್ಯವಾಗಿ ಭಾಷಾ ಅವಹೇಳನ, ಸಾಂಸ್ಕೃತಿಕ ತೊಂದರೆಗಳು ಮತ್ತು ವಿದ್ಯಾವಂತರಲ್ಲಿ ಆಸಕ್ತಿಯ ಕೊರತೆ ಇತ್ಯಾದಿ ಕಾರಣದಿಂದ ಬರುತ್ತವೆ. ಇಲ್ಲಿ ಕನ್ನಡ ಶಿಕ್ಷಕರು ಎದುರಿಸುತ್ತಿರುವ ಕೆಲವು ಪ್ರಮುಖ ಸವಾಲುಗಳನ್ನು ವಿವರಿಸಲಾಗಿದೆ.

ಕನ್ನಡದ ಅಧ್ಯಯನ ಅವಕಾಶಗಳು ಕಡಿಮೆಯಿರುವುದು:

ಕನ್ನಡ ಅಧ್ಯಯನಕ್ಕೆ ಅವಕಾಶಗಳ ಕೊರತೆ. ಅನೇಕ ಶಾಲೆಗಳಲ್ಲಿ ಕನ್ನಡವನ್ನು ಕಲಿಸುವ ವ್ಯವಸ್ಥೆ ಕಡಿಮೆ. ಇದರಿಂದ ಕನ್ನಡ ಭಾಷೆಯನ್ನು ಕಲಿಸಲು ಹೆಚ್ಚಿನ ಅವಕಾಶಗಳು ಲಭ್ಯವಿಲ್ಲ.

ಪಾಠ್ಯಕ್ರಮದ ನಿಯಮಗಳು: ಕನ್ನಡವನ್ನು ಪಾಠದ ಆಯ್ಕೆಯಾದ ಭಾಷೆಯಾಗಿ ಕಲಿಸಲು, ಅನೇಕ ಪ್ರದೇಶಗಳಲಿ ಪಠ್ಯಕ್ರಮದಲ್ಲಿಯೇ ಅವಕಾಶವಿಲ್ಲ.

ಕುಶಲ ಶಿಕ್ಷಕರ ಕೊರತೆ: ಅಭ್ಯಾಸಕ್ಕಾಗಿ ತರಬೇತಿಯ ಕೊರತೆ: ಕನ್ನಡ ಶಿಕ್ಷಕರಿಗೆ ಹೆಚ್ಚಿನ ತರಬೇತಿ, ಸಂಪನ್ಮೂಲಗಳು ಮತ್ತು ಬೆಂಬಲವು

ದೊರೆಯುವುದಿಲ್ಲ. ಇದರಿಂದ ಅರು ಉತ್ತಮವಾಗಿ ಪಾಠ ಮಾಡಲು ಕಷ್ಟಪಡುತ್ತಾರೆ.

ವಿದ್ಯಾರ್ಥಿಗಳ ಭಾವನಾತ್ಮಕ ಸಂಬಂಧದ ಕೊರತೆ:

ವಿದ್ಯಾರ್ಥಿಗಳಲ್ಲಿ ಅನಾಸಕ್ತಿ: ಕನ್ನಡವನ್ನು ಕಲಿಯಲು ವಿದ್ಯಾರ್ಥಿಗಳ ಆಸಕ್ತಿ ಕಡಿಮೆ, ಮತ್ತು ಇತರ ಭಾಷೆಗಳ ಪಾಠಗಳು ಹೆಚ್ಚು ಆಕರ್ಷಕವಾಗುತ್ತವೆ. ಇದರಿಂದ ಕನ್ನಡ ಅಧ್ಯಯನಕ್ಕೆ ಕಡಿಮೆ ಗಮನ ನೀಡಲಾಗುತ್ತದೆ.

ಮಾತೃಭಾಷೆಯ ಸಮರ್ಥನೆ: ಕನ್ನಡವನ್ನೇ ತಮ್ಮ ಮಾತೃಭಾಷೆಯಾಗಿ ಇಟ್ಟುಕೊಳ್ಳಲು ವಿದ್ಯಾರ್ಹಿಗಳಿಗೆ ಪ್ರೇರಣೆ ನೀಡುವುದು, ಶಿಕ್ಷಕರಿಗೆ ದೊಡ್ಡ ಸವಾಲಾಗುತ್ತದೆ.

ಸಾಂಸ್ಕೃತಿಕ ಬೆಂಬಲವಿಲ್ಲದ ವ್ಯವಸ್ಥೆ: ಸಂಸ್ಕೃತಿಯ ಅಭಾವ: ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಬೋಧಿಸುವ ಸಂದರ್ಭಗಳಲಿ ಸಮುದಾಯದ ಬೆಂಬಲವಿಲ್ಲ. ಜೊತೆಗೆ ಕನ್ನಡ ಸಂಸ್ಕೃತಿ ಮತ್ತು ಆಚರಣೆಗಳನ್ನು ಪಾಠಗಳಲ್ಲಿ ಸೇರಿಸುವ ಹಾದಿಯಲ್ಲಿ ಸಾಕಷ್ಟು ಸವಾಲುಗಳು ಎದುರಾಗುತ್ತವೆ.

ಭಾಷೆಯ ಕಡೆಗೆ ಹೆಚ್ಚಿನ ಗಮನ ನಾಶವಾಗುವುದು: ಇತರ ಭಾಷೆಗಳಲ್ಲಿ ಹೆಚ್ಚು ಆದ್ಯತೆ; ಕೆಲವೊಮ್ಮೆ ಸ್ಥಳೀಯ ಅಥವಾ ರಾಷ್ಟ್ರೀಯ ಭಾಷೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ ಮತ್ತು ಕನ್ನಡ ಬೋಧನೆಯೇ ಅತಿ ಕಡಿಮೆ ಆದ್ಯತೆ ಹೊಂದಿರುತ್ತದೆ.

ಕಾರ್ಯನಿರ್ವಹಣೆಯ ಸೌಲಭ್ಯಗಳ ಕೊರತೆ: ಕನ್ನಡ ಶಿಕ್ಷಕರಿಗೆ ಕಡಿಮೆ ವೇತನ: ಕನ್ನಡವನ್ನು ಬೋಧಿಸುವುದಕ್ಕೆ ಇತರ ಭಾಷೆಗಳಿಗಿಂತ ಕಡಿಮೆ ವೇತನ ಅಥವಾ ಅಧಿಕ ಶ್ರಮದ ನಿಯಮಗಳು ಇರುತ್ತವೆ. ಇದರಿಂದ ಇತರ ಭಾಷೆಯ ಶಿಕ್ಷಕರಿಗಿಂತ ಕನ್ನಡ ಶಿಕ್ಷಕರಿಗೆ ಕಡಿಮೆ ಪ್ರೋತ್ಸಾಹ ನೀಡಲಾಗುತ್ತದೆ.

ಸಮಸ್ಯೆಗಳು ಹಲವಾರು, ಅದರೆ ಖಂಡಿತವಾಗಿಯೂ ಕೆಲವು ಪರಿಹಾರಗಳು ಇರುತ್ತವೆ. ಕೊನೆಗೂ ನಾವು ನಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಕಾಪಾಡಬೇಕು. ಹೀಗಾಗಿ ಇಲ್ಲಿ ಕೆಲವು ಪರಿಹಾರಗಳನ್ನು ನೀಡಲಾಗಿದೆ.

ಕನ್ನಡದ ಪ್ರಚಾರ: ಕನ್ನಡ ಶಿಕ್ಷಕರಿಗೆ ಉತ್ತಮ ತರಬೇತಿ, ಶಿಬಿರ, ಕಾರ್ಯಕ್ರಮಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳಿಂದ ವಿವಿಧ ನಿರ್ದೇಶನಗಳನ್ನು ಒದಗಿಸಬೇಕು.

ಶಾಲೆಗಳಲ್ಲಿ ಕನ್ನಡ ಪಾಠಗಳ ಆಯ್ಕೆ: ಕನ್ನಡವನ್ನು ಶಾಲಾ ಪಠ್ಯಕ್ರಮವನ್ನು ಪ್ರಯೋಗಿಕವಾಗಿ ಪರಿಚಯಿಸಿ ಕನ್ನಡದ ಮೂಲಕ ಮತ್ತಷ್ಟು ವಿದ್ಯಾರ್ಥಿಗಳನ್ನು ಪ್ರೇರೇಪಿಸಬಹುದು.

ಸಾಂಸ್ಕೃತಿಕ ಸಂಘಟನೆಗಳು: ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಸಾಂಸ್ಕೃತಿಕ ಸಮುದಾಯಗಳು ಮತ್ತು ಕಾರ್ಯಕ್ರಮಗಳು ಸಹಜವಾಗಿ ಬೋಧಿಸಲು ಯೋಜನೆಗಳನ್ನು ರೂಪಿಸಬೇಕು.

ಆನ್‌ಲೈನ್ ಪ್ಲಾಟ್ ಪಾರ್ಮಗಳ ಬಳಕೆ. ಆನ್‌ಲೈನ್ ಕನ್ನಡ ಪಾಠಗಳು ಮತ್ತು ಆನ್‌ಲೈನ್ ತರಗತಿಗಳನ್ನು ನಿರ್ಮಿಸಿ ವಿದ್ಯಾರ್ಥಿಗಳಿಗೆ ಕನ್ನಡ ಕಲಿಕೆಗೆ ಪ್ರೋತ್ಸಾಹವನ್ನು ನೀಡಬೇಕು.

ಸಾಂಸ್ಕೃತಿಕ ಕಾರ್ಯಕ್ರಮಗಳು : ಕನ್ನಡದ ಹಬ್ಬಗಳು, ಹಿತಚಿಂತನೆಗಳು ಮತ್ತು ಸಾಂಸ್ಕೃತಿಕ ಕಾರ್ಯಗಳಲ್ಲಿ ಭಾಗವಹಿಸಲು ಮತ್ತು ಕನ್ನಡ ಕುರಿತು ಧ್ವನಿಯನ್ನು ಹೆಚ್ಚು ಮಾರ್ಪಡಿಸಲು ಕಾರ್ಯಕ್ರಮಗಳನ್ನು ಆಯೋಜಿಸಬೇಕು.

ಕನ್ನಡ ಸಂಸ್ಕೃತಿ ಮತ್ತು ನೆಟ್ವರ್ಕಿಂಗ್ : ಕನ್ನಡ ಮಾತನಾಡುವ ಕುಟುಂಬಗಳು ನವೀನ ಕನ್ನಡ ಸಮುದಾಯವನ್ನು ಹುಟ್ಟುಹಾಕಲು ಪ್ರಯತ್ನಿಸಬೇಕು.

ಕರ್ನಾಟಕದ ಹೊರಗಿರುವ ಕನ್ನಡ ಪೋಷಕರು, ಸಮುದಾಯಗಳು, ಶಿಕ್ಷಕರು, ಸಂಸ್ಥೆಗಳು, ಕನ್ನಡ ಪತ್ರಿಕೆಗಳು, ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಲು ಪ್ರಯತ್ನಿಸುತ್ತಿದ್ದಾರೆ. ಸರಕಾರದಿಂದ ಸೂಕ್ತ ಬೆಂಬಲ ದೊರೆಯುವುದರಿಂದ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಮುಂದುವರಿಕೆಗೆ ಸಹಾಯವಾಗಬಹುದು.

ನಮ್ಮ ತಾಯ್ನುಡಿಯನ್ನು ಉಳಿಸಲು ಮತ್ತು ಕಾಪಾಡಲು ನಾವು ನಮ್ಮ ಪಾಲಿನ ಕರ್ತವ್ಯವನ್ನು ಮಾಡೋಣ. ನಮ್ಮ ಭಾಷೆ ಮಾನವ ಜಾತಿ ಇರುವವರೆಗೂ ಉಳಿಯಲಿ ಎಂಬುದೇ ನನ್ನ ಆಶಯ.

ಮೈಸೂರು ಅಸೋಸಿಯೇಷನ್, ಮುಂಬಯಿ

The Mysore Association, Bombay

393, Bhau Daji Road, Matunga, Mumbai - 400 019. Tel: (022) 2403 7065
Website: www.mysoreassociation.in E-mail: mysoreassociation.mumbai@gmail.com

ಮೈಸೂರು ಅಸೋಸಿಯೇಷನ್ ನೂರರ ನಲಿವು 1926–2026

ಆಗಸ್ಟ್ 06, 2025

ನೇಸರು ಜಾಗತಿಕ ಸಣ್ಣ ಕಥೆ ಸ್ಪರ್ಧೆ – 2025

ಶತಮಾನೋತ್ಸವ ಪ್ರಶಸ್ತಿ

ಮೈಸೂರು ಅಸೋಸಿಯೇಷನ್, ಮುಂಬೈ ಒಂದು ಪ್ರತಿಷ್ಠಿತ ಕನ್ನಡ ಸಂಸ್ಥೆಯಾಗಿದ್ದು, ತನ್ನ ಶತಕವನ್ನು ಪೂರೈಸುವತ್ತ ಮುಂದುವರಿಯುತ್ತಿದೆ. ಈ ಮೊದಲೂ ಕೂಡಾ ಕನ್ನಡ ಕವನ, ಕಥೆ ಹಾಗೂ ಏಕಾಂಕ ನಾಟಕ ಸ್ಪರ್ಧೆಯನ್ನು ಆಯೋಜಿಸುತ್ತಲೇ ಬಂದಿದೆ. ಇದರ ಮುಂದುವರಿದ ಭಾಗವಾಗಿ "ಶತಮಾನೋತ್ಸವ ವಿಶೇಷ"ಜಾಗತಿಕ ಸಣ್ಣ ಕಥೆ ಸ್ಪರ್ಧೆಯ ಘೋಷಣೆಯನ್ನು ಈ ಮೂಲಕ ಮಾಡಲಾಗುತ್ತಿದೆ.

ಈ ಸ್ಪರ್ಧೆಯಲ್ಲಿ ವಿಶ್ವದಾದ್ಯಂತ ಆಸಕ್ತರೆಲ್ಲರೂ ಭಾಗವಹಿಸಬಹುದು. ಇಲ್ಲಿ ಯಾವುದೇ ಪ್ರವೇಶ ಶುಲ್ಕವಿರುವುದಿಲ್ಲ. ಆಸಕ್ತರು ಯಾವುದೇ ವಿಷಯದ ಕುರಿತು ಕಥೆಯನ್ನು ರಚಿಸಬಹುದು.

ನೇಸರು ಜಾಗತಿಕ ಸಣ್ಣ ಕಥೆ ಸ್ಪರ್ಧೆ –2025

ಪ್ರಥಮ ಬಹುಮಾನ	–	ರೂ.	20,000
ದ್ವಿತೀಯ ಬಹುಮಾನ	–	ರೂ.	15,000
ತೃತೀಯ ಬಹುಮಾನ	–	ರೂ.	10,000
ಮೆಚ್ಚುಗೆಯ ಬಹುಮಾನ (ಇಬ್ಬರಿಗೆ): ತಲಾ	–	ರೂ.	5,000

ಸ್ಪರ್ಧೆಯ ನಿಯಮಾವಳಿಗಳು:

- ಕಥೆಗಳು ಕನ್ನಡದಲ್ಲಿದ್ದು, ಸ್ವರಚಿತವಾಗಿರಬೇಕು, ಅನುವಾದ ಅನುಕರಣೆ ಆಗಿರಕೂಡದು.
- ಸ್ಪರ್ಧೆಗೆ ಕಳುಹಿಸಿದ ಕಥೆಗಳು ಬೇರೆಲ್ಲೂ ಪ್ರಕಟವಾಗಿರಬಾರದು.
- ಒಬ್ಬರಿಗೆ ಒಂದೇ ಕಥೆ ಕಳುಹಿಸಲು ಅವಕಾಶ.
- ಸ್ಪರ್ಧೆಗೆ ಬಂದ ಕಥೆಯನ್ನು ಮರಳಿಸಲಾಗುವುದಿಲ್ಲ.
- ಕಥೆಗಳು 1000 ಪದಗಳಿಗೆ ಮೀರದಂತಿರಬೇಕು.
- ಕಾಗದದ ಒಂದೇ ಮಗ್ಗುಲಲ್ಲಿ ಚಿತ್ತಿಲ್ಲದಂತೆ ಬರೆದಂತಹ ಅಥವಾ ಕಂಪ್ಯೂಟರ್ ಮುದ್ರಿತ ಬರಹವನ್ನು ಅಂಚೆ ಅಥವಾ ಕೆಳಗೆ ತಿಳಿಸಿದ ಇಮೇಲ್ ಗೆ ಕಳುಹಿಸಬಹುದು.

  kate.nesaru@gmail.com
- ಬರೆದವರ ಹೆಸರು, ವಿಳಾಸ, ಜನ್ಮ ದಿನಾಂಕ, ಮೊಬೈಲ್ ಸಂಖ್ಯೆ ಹಾಗೂ ಇಮೇಲ್ ಪ್ರತ್ಯೇಕ ಪುಟದಲ್ಲಿ ಬರೆದಿರಬೇಕು.
- ತೀರ್ಪುಗಾರರ ತೀರ್ಮಾನವೇ ಅಂತಿಮ. ಇದರ ಬಗ್ಗೆ ಯಾವ ಚರ್ಚೆ ಅಥವಾ ಪತ್ರ ವ್ಯವಹಾರ ಇಲ್ಲ.
- ಕಥೆಗಳು ನಮ್ಮ ಕೈ ಸೇರುವ ಕೊನೆಯ ದಿನಾಂಕ: ಅಕ್ಟೋಬರ್ 31, 2025
- ಆಯ್ಕೆಯಾದ ಕಥೆಗಳನ್ನು ನಮ್ಮ ಮೈಸೂರು ಅಸೋಸಿಯೇಷನ್ನಿನ ಮುಖವಾಣಿ 'ನೇಸರು'ವಿನಲ್ಲಿ ಕಾಲಕಾಲಕ್ಕೆ ಪ್ರಕಟಿಸುವ ಹಕ್ಕು ಮೈಸೂರು ಅಸೋಸಿಯೇಷನ್ ಕಾದಿರಿಸಿದೆ.

Postal Address:
The Mysore Association, Bombay
393, Bhau Daji Road, Matunga (Central), Mumbai – 400019
Tel: 022- 24037065 (M) - 8369788157

(ಬೆಳಿಗ್ಗೆ 11.00 ರಿಂದ ಸಂಜೆ 7.00 ಘಂಟೆಯವರೆಗೆ)

ನವರಾತ್ರಿ ಹಬ್ಬದ ಕಾರ್ಯಕ್ರಮಗಳು

ಸೋಮವಾರ, ಸೆಪ್ಟೆಂಬರ್ 22, 2025	ಬೆಳಿಗ್ಗೆ 10.00 ಸಂಜೆ 4.30	ಪ್ರತಿಪದಾ, ಘಟಸ್ಥಾಪನೆ ದೇವಿ ಪಾರಾಯಣ
ಮಂಗಳವಾರ, ಸೆಪ್ಟೆಂಬರ್ 23, 2025	ಸಂಜೆ 5.00	ತ್ರಿಪುರ ಸುಂದರಿ, ಸೌಂದರ್ಯ ಲಹರಿ ಎಲ್ಲರೂ ಒಟ್ಟಾಗಿ ಪಠಣ
ಬುಧವಾರ, ಸೆಪ್ಟೆಂಬರ್ 24, 2025	ಸಂಜೆ 5.00	ವಾದ್ಯ : ಕು. ಸಾಯಿನಾಥ ಮತ್ತು ಸಾಯಿ ತೇಜ ದೇವರ ಹಾಡು : ಶ್ರೀಮತಿ ಅನಸೂಯ ವಾಸ
ಗುರುವಾರ, ಸೆಪ್ಟೆಂಬರ್ 25, 2025	ಸಂಜೆ 5.00	ದೇವರ ನಾಮ : ಶ್ರೀಮತಿ ಮಂಜುಳಾ ಅವಧಾನಿ
ಶುಕ್ರವಾರ, ಸೆಪ್ಟೆಂಬರ್ 26, 2025	ಸಂಜೆ 5.00	ಲಲಿತಾ ಪಂಚಮಿ ದೇವರ ನಾಮ: ಶ್ರೀಮತಿ ಶ್ಯಾಮಲಾ ರಾಧೇಶ್ ಮತ್ತು ತಂಡ ಅರಶಿಣ ಕುಂಕುಮ, ಕುಂಕುಮಾರ್ಚನೆ
ಶನಿವಾರ, ಸೆಪ್ಟೆಂಬರ್ 27, 2025	ಸಂಜೆ 5.00	ನೃತ್ಯ : ಕು. ಕ್ಷಮಾ ನಾಮಸ್ಮರಣೆ : ಶ್ರೀಮತಿ ಪದ್ಮ ಮತ್ತು ಶ್ರೀ. ರವಿ
ಭಾನುವಾರ, ಸೆಪ್ಟೆಂಬರ್ 28, 2025	ಮಧ್ಯಾಹ್ನ 3.00	ಶಾರದಾ ಪೂಜೆ – ಚಂಡಿ ಹೋಮ ಹಾಡುಗಾರಿಕೆ: ಶ್ರೀಮತಿ ಶ್ಯಾಮಲಾ ರಾಧೇಶ್ ಮತ್ತು ಕು. ಮಹತಿ ರಾಧೇಶ್ ನೃತ್ಯ: ಕು. ಅಕ್ಷತಾ ರಾಜೇಂದ್ರ ಪುಟ್ಟು
ಸೋಮವಾರ, ಸೆಪ್ಟೆಂಬರ್ 29, 2025	ಮಧ್ಯಾಹ್ನ 3.00	ಶಾರದಾ ಪೂಜೆ: ದೇವಿ ಮಹಾತ್ಮೆ – ಶ್ರೀಮತಿ ವಿಷ್ಣುಪ್ರಿಯಾ ಹಾಗೂ ತಂಡ
ಮಂಗಳವಾರ, ಸೆಪ್ಟೆಂಬರ್ 30, 2025	ಸಂಜೆ 5.00	ದುರ್ಗಾಷ್ಟಮಿ ಸುವಾಸಿನಿ ಹಾಗೂ ಕನ್ನಿಕಾ ಪೂಜೆ
ಬುಧವಾರ, ಸೆಪ್ಟೆಂಬರ್ 30, 2025	ಸಂಜೆ 5.00	ಮಹಾನವಮಿ ದೇವರ ಹಾಡು–ಕು. ಸುಶಾಂತ್ ಪೂಜಾರಿ ಕೋಲಾಟ
ಗುರುವಾರ, ಅಕ್ಟೋಬರ್ 2, 2025	ಬೆಳಿಗ್ಗೆ 10.00	ದಸರಾ ಹಬ್ಬ

ಪ್ರತಿದಿನ ಸಂಜೆ ಕುಂಕುಮಾರ್ಚನೆ, ಪೂಜೆ, ಪ್ರಸಾದ ವಿನಿಯೋಗ ಇರುತ್ತದೆ.
ಹಾಗೆಯೇ ಸಂಜೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಒಂದು ದಿನದ ಕಾರ್ಯಕ್ರಮದ ಪ್ರಾಯೋಜಕತೆ	:	ರೂ. 12,000/–
ಸುಹಾಸಿನಿ ಪೂಜೆ	:	ರೂ. 15,000/–
ಕನ್ನಿಕಾ ಪೂಜೆ	:	ರೂ. 15,000/–
ಸಾಧಾರಣ ದೇಣಿಗೆ	:	ರೂ. 2,000/–

ವಿವರಗಳಿಗಾಗಿ ಈ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಬಹುದು:

ಮೈಸೂರು ಅಸೋಸಿಯೇಷನ್ – 83697 88157

ಶ್ರೀಮತಿ ರೇಷ್ಮಾ ಶಂಕರಲಿಂಗ್ – 90040 38282, ಶ್ರೀಮತಿ ವೀಣಾ ಜೋಶಿ – 98332 61627

ಮುಂಬರುವ ಕಾರ್ಯಕ್ರಮಗಳು

ಸೆಪ್ಟೆಂಬರ್ 20, 2025 – ಶನಿವಾರ ಸಂಜೆ 6.30 – "ಸಂಗೀತ ಸಂಧ್ಯಾ"
ಪಂಡಿತ್ ಉಪೇಂದ್ರ ಭಟ್ ಅವರಿಂದ ದಾಸವಾಣಿ ಹಾಗೂ ಸಂತವಾಣಿ

ಮೈಸೂರು ಅಸೋಸಿಯೇಷನ್, ಮುಂಬಯಿ

ಭಾರತೀಯ ವಿದ್ಯಾ ಭವನ ಬೆಂಗಳೂರು

ಇವರ ಜೊತೆಗೂಡಿ

ಶತಮಾನೋತ್ಸವದ ಸಂಭ್ರಮ, ಬೆಂಗಳೂರಿನಲ್ಲಿ

ಭಾನುವಾರ, ಅಕ್ಟೋಬರ್ 05, 2025ರಂದು ಬೆಳಗ್ಗೆ 10:30ರಿಂದ

ಮುಖ್ಯ ಅತಿಥಿ : ಶ್ರೀ. ಪ್ರಕಾಶ್ ಬೆಳವಾಡಿ
(ಹೆಸರಾಂತ ನಾಟಕಕಾರ ಮತ್ತು ಚಲನಚಿತ್ರ ನಟ, ನಿರ್ದೇಶಕ)

ವಿಶೇಷ ಅತಿಥಿ : ಶ್ರೀ. ಐ. ಎಂ. ವಿಠ್ಠಲಮೂರ್ತಿ
(ಮಾಜಿ ಅಧ್ಯಕ್ಷರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ)

ಸ್ಥಳ: ಭಾರತೀಯ ವಿದ್ಯಾಭವನ ಆಡಿಟೋರಿಯಂ, ರೇಸ್ ಕೋರ್ಸ್ ರೋಡ್, ಬೆಂಗಳೂರು

ಕಾರ್ಯಕ್ರಮ:

ಬೆಳಿಗ್ಗೆ 11:00	–	**ಗಣೇಶ ಪ್ರಾರ್ಥನೆ**
ಬೆಳಿಗ್ಗೆ 11:05	–	ಸ್ವಾಗತ– **ಡಾ. ಗಣಪತಿ ಶಂಕರಲಿಂಗ್,** ಗೌ. ಕಾರ್ಯದರ್ಶಿ, ಮೈಸೂರು ಅಸೋಸಿಯೇಷನ್, ಮುಂಬೈ
ಬೆಳಿಗ್ಗೆ 11:10	–	**ನಾವು ನಡೆದು ಬಂದ ದಾರಿ – ವಿಡಿಯೋ**
ಬೆಳಿಗ್ಗೆ 11:20	–	ಅತಿಥಿಗಳನ್ನು ರಂಗಮಂಚದ ಮೇಲೆ ಬರಮಾಡಿಕೊಳ್ಳುವುದು ಮತ್ತು ಅವರಿಗೆ ಅಧ್ಯಕ್ಷರಿಂದ ಸನ್ಮಾನ
ಮಧ್ಯಾಹ್ನ 12:15	–	ಭಾಷಣ : ಶ್ರೀ. ಐ. ಎಂ. ವಿಠ್ಠಲಮೂರ್ತಿಯವರಿಂದ ಶ್ರೀ. ನಾಗರಾಜ ಮೂರ್ತಿಯವರಿಂದ ಶ್ರೀ. ಪ್ರಕಾಶ್ ಬೆಳವಾಡಿಯವರಿಂದ ಅಧ್ಯಕ್ಷರ ಭಾಷಣ – ಶ್ರೀಮತಿ ಕಮಲಾ ಅವರಿಂದ
ಮಧ್ಯಾಹ್ನ 12:45	–	ವಂದನಾರ್ಪಣೆ – **ಶ್ರೀ. ನಾರಾಯಣ ನವಿಲೇಕರ್**
ಮಧ್ಯಾಹ್ನ 12:50	–	**ಅಸೋಸಿಯೇಷನ್ ತಂಡದವರಿಂದ ಹಾಡುಗಳು** (ಹಳೆಯ ನಾಟಕಗಳಿಂದ ಆಯ್ದ ರಂಗ ಗೀತೆಗಳು ಮತ್ತು ದೃಶ್ಯ ಭಾಗಗಳು)
ಮಧ್ಯಾಹ್ನ 1:20	–	**ಊಟ ವಿರಾಮ**
ಮಧ್ಯಾಹ್ನ 2:15	–	ನೃತ್ಯ – **ಶ್ರೀಮತಿ ಸುಧಾ ಶ್ರೀನಿವಾಸ್ ರಾವ್** ಮತ್ತು **ತಂಡ**ದವರಿಂದ
ಮಧ್ಯಾಹ್ನ 2:45	–	ಹಾಸ್ಯ ಕಿರಣ – **ಶ್ರೀ. ಗುಂಡುರಾವ್**
ಮಧ್ಯಾಹ್ನ 3.15	–	ಕಿರುನಾಟಕ – **ಶ್ರೀ. ರಂಗನಾಥ್**
ಸಂಜೆ 4:00	–	**ತಿಂಡಿ ವಿರಾಮ**
ಸಂಜೆ 4:20	–	**ಗಾಯನ ಮೈಸೂರಿನಿಂದ ಮುಂಬೈ ತಕ್**
ಸಂಜೆ 4:45	–	**ಶ್ರೀಮತಿ ಮಾನಸಿ ಪ್ರಸಾದ್ – ದಾಸರ ಪದಗಳು, ಅಭಂಗ್, ಭಜನೆಗಳು,** **ಶ್ರೀಮತಿ ನಳಿನಾ ಮೋಹನ್, ಪಿಟೀಲು** **ಶ್ರೀ. ಅದಮ್ಯ ರಮಾನಂದ್** – ಮೃದಂಗ **ಶ್ರೀ. ಆದರ್ಶ ಶೆಣೈ** – ತಬಲ
ಸಂಜೆ 6:15	–	ಬೀಳ್ಕೊಡುಗೆ : ಡಾ. ಗಣಪತಿ ಶಂಕರಲಿಂಗ್ ನಿರೂಪಣೆ : ಶ್ರೀ. ವಿ. ರಂಗನಾಥ ರಾವ್

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077